ಸಂಚಿಕೆ ೧೩

ಜನವರಿ 2019

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಸಂಚಿಕೆ ೧೩
ಜನವರಿ 2019

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ

## ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ - ಪುಟ ೧
ಹಬ್ಬ - ಪುಟ ೨
ವ್ಯಕ್ತಿ ಪರಿಚಯ - ಪುಟ ೩
ರಾಮಾಯಣ - ಪುಟ ೪
ಸಂದರ್ಶನ - ಪುಟ ೫ -೬
ಪ್ರಾಣಿ ಪ್ರಪಂಚ - ಪುಟ ೭
ಚಿಣ್ಣರ ಚಿತ್ತಾರ - ಪುಟ ೮
ಕಥಾ ಸಂಕಲನ - ಪುಟ ೯
ನಾ ಕಂಡ ಸಿನಿಮಾ - ಪುಟ ೧೦
ಚಿತ್ರಕಲಾ ಲೋಕ - ಪುಟ ೧೧
ಪದ ಹುಡುಕೋಣ - ಪುಟ ೧೨
ಪತ್ರ ಮಾಲೆ ಮೂರ್ತಿ ತಾತ - ಪುಟ ೧೩-೧೪

**ಸಂಪಾದಕೀಯ: ರಜನೀ ಮಹೇಶ್**

ಕರಾವಳಿ ಮತ್ತು ಉತ್ತರ ಕನ್ನಡ ಭಾಗದ ಜನರಿಗೆ ಕೊಟ್ಟೆ ಕಡುಬು ಚಿರಪರಿಚಿತ. ಹಬ್ಬ ಹರಿದಿನಗಳ ಸಂದರ್ಭದಲ್ಲಿ ಕೊಟ್ಟೆ ಕಡುಬಿನ (ಮೂಡೆ) ಘಮ ಘಮ ಮನೆಯೆಲ್ಲಾ ತುಂಬಿರುತ್ತದೆ. ಕೊಟ್ಟೆ ಕನ್ನಡದ ಪದವಾದರೆ, ಇದನ್ನು ತುಳುವಿನಲ್ಲಿ ಮೂಡೆ ಎನ್ನುತ್ತಾರೆ. ಕೊಟ್ಟೆ ಕಡುಬು ತಿನ್ನಲು ಬಹಳ ರುಚಿಕರ, ಆದರೆ ಮೈತುಂಬ ಮುಳ್ಳುಗಳಿರುವ ಮುಂಡಕದ ಎಲೆಯನ್ನು ಸುರಳಿ ಸುತ್ತಿ ಕೊಟ್ಟೆ ತಯಾರಿಸುವುದು ಸುಲಭದ ಮಾತಲ್ಲ.





ಈ ಕೊಟ್ಟೆಯನ್ನು ತಯಾರಿಸಲು ಮುಂಡಕ(ಮುಂಡಗ) ಎಲೆಯನ್ನು ಬಳಸುತ್ತೇವೆ. ಸಾಮಾನ್ಯವಾಗಿ ಈ ಗಿಡಗಳು ನದಿಯ, ಕೆರೆಯ ಬದಿಗಳಲ್ಲಿ ಮತ್ತು ಬೇಲಿ ಯಲ್ಲಿ ಹೆಚ್ಚಾಗಿ ಕಾಣಸಿಗುತ್ತದೆ. ಮುಂಡಕದ ಇಡೀ ಪೊದೆ ಮುಳ್ಳಿನಿಂದ ಕೂಡಿದ್ದು ಅದರ ಓಲಿ(ಎಲೆ)ಯನ್ನು ಕತ್ತರಿಸಿ ತರಬೇಕು. ಕತ್ತರಿಸಿ ತಂದ ಓಲಿ ಗಳ ಮೇಲಿನ ಮುಳ್ಳನ್ನು ಸವರಿ (ಹೆರೆದು), ಬೆಂಕಿಯಲ್ಲಿ ಹದವಾಗಿ ಸುಟ್ಟು ಕಾಯಿಸಬೇಕು. ಹೀಗೆ ಕಾಯಿಸುವುದರಿಂದ ಓಲಿ ಸ್ವಲ್ಪ ಮೃದುವಾಗುತ್ತದೆ. ಹಾಗೆಯೇ ಅದರ ಪರಿಮಳ ಹೆಚ್ಚುತ್ತದೆ. ಕಾಯಿಸಿದ ಓಲಿಯನ್ನು ತಿಕ್ಕಿ ಮಡಚುತ್ತಾರೆ. ನಂತರ ಓಲಿಯನ್ನು ಸೇರಿಸಿ ಚಂದ್ರಿಕೆ ಮಾಡುತ್ತಾರೆ. ಬಳಿಕ ತೆಂಗಿನ ಕಡ್ಡಿಯ ಸಹಾಯದಿಂದ ಓಲಿಯನ್ನು ಮಡಚಿ ಬುಡ ಮಾಡಿಕೊಂಡು, ಸುತ್ತಿ ಕೊಳವೆ ರೂಪದ ಕೊಟ್ಟೆಯನ್ನು ಮಾಡುತ್ತಾರೆ. ಹೀಗೆ ತಯಾರಿಸಿದ ಕೊಟ್ಟೆಯನ್ನು ಅಟ್ಟದಲ್ಲಿ ಇಟ್ಟು ಇಡ್ಲಿ ಹಿಟ್ಟನ್ನು ಹಾಕಿ ಹಬೆಯಲ್ಲಿ ಬಿಸಿಬಿಸಿ ಕೊಟ್ಟೆ ಕಡುಬುಗಳನ್ನು ತಯಾರಿಸಲಾಗುತ್ತದೆ. ಮುಂಡಕ ಓಲಿಯಲ್ಲಿ ಮಾಡುವ ಈ ಕಡುಬಿಗೆ ವಿಶೇಷವಾದ ರುಚಿ ಮತ್ತು ಪರಿಮಳ ಇರುತ್ತದೆ.













ಆದುನಿಕ ಭರಾಟೆಯಿಂದಾಗಿ ಇಂತಹ ಹಲವಾರು ತಿನಿಸುಗಳು ಮರೆತು ಹೋದರೂ ಕೊಟ್ಟೆ ಕಡುಬು ಮಾತ್ರ ಇನ್ನೂ ಹಲವಾರು ಮನೆಗಳಲ್ಲಿ ಉಳಿದುಕೊಂಡು ಬಂದಿದೆ. ಒಮ್ಮೆ ಕರಾವಳಿಗೆ ಭೇಟಿ ನೀಡಿ, ಮರೆಯದೆ ಕೊಟ್ಟೆ ಕಡುಬು ತಿನ್ನಿ.



ರಜನೀ



ಅಭಿಜ್ಞಾ



ಶ್ರೀಸ್ವರೂಪ್



ಸಿಹಿ



ಮಹಿತ್

*ಹಚ್ಚೇವು ಕನ್ನಡದ ದೀಪ...*

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com

## ಹಬ್ಬ : ಸಂಕ್ರಾಂತಿ ಬಂತು ರತ್ತೋ ರತ್ತೋ



## ಲಗೋರಿ ಆಟ : ಇಂಪನ ಗೋಪಿನಾಥ್




ನಮಸ್ಕಾರ, ನನ್ನ ಹೆಸರು ಇಂಪನ ಗೋಪಿನಾಥ್. ಇಂದಿನಿಂದ ಸಂಚಿಕೆಯಲ್ಲಿ ನಾನು ನಿಮಗೆ ಕೆಲವು ಆಟಗಳ ಬಗ್ಗೆ ಹೇಳ್ತೀನಿ. ಇವತ್ತಿನ ಆಟ - ಲಗೋರಿ.

ಈ ಆಟ ಇಂಡಿಯಾದ ಮೂಲ ಆಟ. ೬ ಜನ ಇರಬೇಕು . ಆಮೇಲೆ ೬ ಜನ/ ಮಕ್ಕಳನ್ನು ೨ team ಆಗಿ split ಮಾಡಬೇಕು. ಈಗ ಉದಾಹರಣೆಗೆ team A ಮತ್ತು team B ಅಂತ ಹೇಳೋಣ. ಎಲ್ಲದಕಿಂತ ಮುಂಚೆ ಈ ಆಟ ಆಡಲು ಬೇಕಾಗಿರುವುದು ಒಂದು tennis ball ಮತ್ತು ಕೆಲವು ಚಪ್ಪಟೆ ಕಲ್ಲುಗಳು. ಚಪ್ಪಟೆ ಕಲ್ಲುಗಳನ್ನು tower ತರಹ ಜೋಡಿಸಿ, ಎರಡೂ ತಂಡಗಳು ( team) tower ಎದುರು ಬದರು ನಿಲ್ಲಬೇಕು. A ತಂಡದ ಒಂದೊಂದೇ ಆಟಗಾರ / ಆಟಗಾರ್ತಿ ಕಲ್ಲಿನ tower ಅನ್ನು ಟೆನಿಸ್ ಬಾಲ್ ನಿಂದ ಹೊಡೆದು ಉರುಳಿಸಬೇಕು. ಉರುಳಿಸಿದ ನಂತರ ಮತ್ತೆ ಟವರ್ ಪುನಃ ಜೋಡಿಸಬೇಕು. ಇದು A ತಂಡದ ಗುರಿ.



B ತಂಡದ ಗುರಿ, A ತಂಡ ಮತ್ತೆ ಜೋಡಿಸುವ ಮೊದಲು ಚೆಂಡಿನಿಂದ ಆಟಗಾರರನ್ನು ಹೊಡೆದು ‘out’ ಮಾಡಬೇಕು. ಮತ್ತೆ B ತಂಡ tower ನ್ನು ಜೋಡಿಸುವ turn ತಗೋಬೇಕು. ಬಾಲಿನಿಂದ ಹೊಡೆತ ತಪ್ಪಿಸಿಕೊಳ್ಳಲು ಮೈದಾನ full ಓಡಿ ಓಡಿ ಸುಸ್ತಾಗಿ ಬಿಡ್ತೀವಿ ಈ ಆಟ ಆಡಿದರೆ. ನಾನು ಈ ಸರಿ India ಗೆ ಹೋದಾಗ ನನ್ನ ಅಜ್ಜಿ ಮನೆಯಲ್ಲಿ ನನ್ನ ಎಲ್ಲ ಕಸಿನ್ಸ್ ಮತ್ತು ಫ್ರೆಂಡ್ಸ್ ಜೊತೆ ಆಡಿ ಮಜಾ ಮಾಡಿದೆ. ನೀವೂ ಅಷ್ಟೆ, ವೆದರ್ ಚೆನ್ನಾಗಿದ್ದಾಗ T.V. ಮುಂದೆ ಅಥವಾ ಫೋನ್ ನೋಡ್ತಾ ಕೂಡುವ ಬದಲು ಈ ಆಟವನ್ನು ಆಡಿ.



## ವ್ಯಕ್ತಿ ಪರಿಚಯ : ಮಾಸ್ತಿ ವೆಂಕಟೇಶ ಅಯ್ಯಂಗಾರ್

'ಕನ್ನಡದ ಆಸ್ತಿ' ಎಂದೇ ಪರಿಗಣಿತರಾದ ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ಅವರು ಕೋಲಾರದ ಮಾಲೂರಿನ ಮಾಸ್ತಿ ಗ್ರಾಮದಲ್ಲಿ ರಾಮಸ್ವಾಮಿ ಅಯ್ಯಂಗಾರ್ – ತಿರುಮಲ್ಲಮ್ಮ ದಂಪತಿಗಳಿಗೆ ೮-೬-೧೮೯೧ರಲ್ಲಿ ಜನಿಸಿದರು. ಪ್ರೌಢವಿದ್ಯಾಭ್ಯಾಸವನ್ನು ಮೈಸೂರಿನ ವೆಸ್ಲಿಯನ್ ಹೈಸ್ಕೂಲಿನಲ್ಲೂ, ಎಫ್.ಎ. ಅನ್ನು ಮಹಾರಾಜ ಕಾಲೇಜಿನಲ್ಲೂ ಮುಗಿಸಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎ ಮುಗಿಸಿ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಎಂಎ ಪದವಿಯನ್ನು ೧೯೧೪ರಲ್ಲಿ ಪಡೆದರು.

ಇವರು ೧೯೧೪ರಲ್ಲಿ ಮೈಸೂರು ಸರ್ಕಾರದ ಅಸಿಸ್ಟೆಂಟ್ ಕಮೀಷನರ್ ಆಗಿ ಕೆಲಸಕ್ಕೆ ಸೇರಿದರು. ಸರ್ ಎಂ. ವಿಶ್ವೇಶ್ವರಯ್ಯನವರ ಕೈಕೆಳಗೆ ಕೆಲಸ ಮಾಡಿದ ಮಾಸ್ತಿ ಅವರು ಸಬ್ ಡಿವಿಜನ್ ಆಫೀಸರ್ (೧೯೨೭) ಮ್ಯಾಜಿಸ್ಟ್ರೇಟ್ ಮತ್ತು ಕಂಟ್ರೋಲರ್ (೧೯೩೦) ಡೆಪ್ಯುಟಿ ಕಮೀಷನರ್ (೧೯೩೪) ಎಕ್ಸೈಜ್ ಕಮೀಷನರ್ (೧೯೪೦) ಮೊದಲಾದ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸಿ ೧೯೪೩ ಸ್ವಇಚ್ಛೆಯಿಂದ ಸರ್ಕಾರಿ ಸೇವೆಯಿಂದ ನಿವೃತ್ತರಾದರು.
ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ (೧೯೪೩-೪೮) ಅಧ್ಯಕ್ಷರಾಗಿ (೧೯೫೦-೬೪) ಸೇವೆ ಸಲ್ಲಿಸಿರುವ ಇವರು 'ಜೀವನ' ಮಾಸಪತ್ರಿಕೆಯನ್ನು ೨೫ ವರ್ಷ ಪ್ರಕಟಿಸಿದರು. ಕನ್ನಡ ಏಕೀಕರಣಕ್ಕೆ ಶ್ರಮಿಸಿದರು. ಸಹಾಯನಿಧಿ ಮೂಲಕ ಕನ್ನಡ ಲೇಖಕರನ್ನು ಬೆಳಕಿಗೆ ತಂದರು. ಪಿಇಎನ್ ಸಂಸ್ಥೆಯ ಉಪಾಧ್ಯಕ್ಷರಾಗಿ (೧೯೬೪) ಆಯ್ಕೆಯಾಗಿದ್ದರು. ೧೯೪೨ರಲ್ಲಿ ಅಖಿಲ ಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ವಿಭಾಗದ ಅಧ್ಯಕ್ಷರಾಗಿದ್ದರು. ಅನೇಕ ಅಖಿಲ ಭಾರತ ಸಮ್ಮೇಳನಗಳಲ್ಲಿ ಭಾಗವಹಿಸಿದ್ದಾರೆ. ೧೯೮೩ ರಲ್ಲಿ ಚಿಕವೀರ ರಾಜೇಂದ್ರ ಕಾದಂಬರಿಗಾಗಿ ಜ್ಞಾನಪೀಠ ಪ್ರಶಸ್ತಿಯಿಂದ ಪುರಸ್ಕೃತಗೊಂಡ ಮಾಸ್ತಿಯವರು ಕನ್ನಡಕ್ಕೆ ನಾಲ್ಕನೆ ಜ್ಞಾನಪೀಠ ಪ್ರಶಸ್ತಿಯನ್ನು ತಂದು ಕೊಟ್ಟರು
ಕನ್ನಡ ಸಣ್ಣಕತೆಗಳ ಜನಕರೆಂದೇ ಖ್ಯಾತಿ ಹೊಂದಿದ ಮಾಸ್ತಿ ಅವರು ನೂರಕ್ಕೂ ಮೀರಿ ಕೃತಿಗಳನ್ನು ವಿವಿಧ ವಿಷಯಗಳ ಮೇಲೆ ರಚಿಸಿ ಕನ್ನಡವನ್ನು ಬೆಳೆಸಿದವರಲ್ಲಿ ಒಬ್ಬರಾಗಿದ್ದಾರೆ. ಇಲ್ಲಿ ಅವರ ಕೆಲವು ಕೃತಿಗಳನ್ನು ಉದಾಹರಿಸಿದೆ.

ಸಣ್ಣಕಥೆಗಳು(೧೦ ಭಾಗಗಳು), ನವರಾತ್ರಿ(ಕಥನ ಕವನಗಳು), ಚಿಕವೀರರಾಜೇಂದ್ರ(ಕಾದಂಬರಿ), ಕೃಷ್ಣಕರ್ಣಾಮೃತ (ಸಂಸ್ಕೃತ ಕಾವ್ಯಾನಂದ), ನಮ್ಮ ನುಡಿ(ಭಾಷಾಶಾಸ್ತ್ರ), ಷೇಕ್ಸ್ಪಿಯರನ ನಾಟಕಗಳು(ಗದ್ಯಾನುವಾದ), ಜನಪದ ಸಾಹಿತ್ಯ(ಪ್ರಬಂಧ), ಪುರಂದರದಾಸ, ಕನಕಣ್ಣ(ನಾಟಕಗಳು), ಪ್ರಸಂಗ(೪ ಭಾಗಗಳು), ಸಂಪಾದಕೀಯ(೫ ಭಾಗಗಳು), ಶ್ರೀರಾಮಪಟ್ಟಾಭಿಷೇಕ (ಕಥನಕಾವ್ಯ), ಸರ್ ಎಂ. ವಿಶ್ವೇಶ್ವರಯ್ಯ(ಸಂಪಾದನೆ) ಇತ್ಯಾದಿ. ಹಲವು ಕೃತಿಗಳನ್ನು ಇಂಗ್ಲಿಷಿಗೆ ಮಾಸ್ತಿ ಮತ್ತು ಇತರರು ಅನುವಾದಿಸಿದ್ದಾರೆ

**ಪ್ರಶಸ್ತಿ/ಪುರಸ್ಕಾರಗಳು**

1. ಜ್ಞಾನಪೀಠ ಪ್ರಶಸ್ತಿ (೧೯೮೩).
2. ಮೈಸೂರು ವಿಶ್ವವಿದ್ಯಾಲಯದ ಡಿ. ಲಿಟ್(೧೯೭೭)
3. ಕರ್ನಾಟಕ ವಿಶ್ವವಿದ್ಯಾಲಯದ ಡಿ. ಲಿಟ್(೧೯೫೬)
4. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೬೮)
5. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಪದವಿ(೧೯೫೩)
6. ದಕ್ಷಿಣ ಭಾರತ ಸಾಹಿತ್ಯಗಳ ಸಮ್ಮೇಳನ ಅಧ್ಯಕ್ಷ ಪದವಿ(೧೯೪೬)
7. ಕರ್ನಾಟಕ ವಿಶ್ವವಿದ್ಯಾಲಯ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿತು.
8. ಮೈಸೂರು ಮಹಾರಾಜರು "ರಾಜಸೇವಾ ಪ್ರಸಕ್ತ" ಎಂದು ಗೌರವಿಸಿದ್ದರು.

ಜೀವನ ಪರ್ಯಂತ ಕನ್ನಡ ಸೇವೆಯನ್ನು ಮಾಡಿದ ಮಾಸ್ತಿಯವರು ಜೂನ್ ೬ ೧೯೮೬ ರಂದು ನಿಧನ ಹೊಂದಿದರು...


ಮಾಹಿತಿ ಸಂಗ್ರಹ – ಗೂಗಲ್

# ೧. ಮಾರೀಚ ಮತ್ತು ಸುಬಾಹು ವಧೆ

## ರಾಮಾಯಣ

ನಾಲ್ವರು ರಾಜಕುಮಾರರು ಸುಂದರವಾಗಿ ದಷ್ಟಪುಷ್ಟವಾಗಿ ಬೆಳೆದರು. ವಸಿಷ್ಠರು ಅವರ ಗುರುಗಳಾಗಿದ್ದರು. ರಾಜಕುಮಾರರು ಅವರಿಂದ ಬಿಲ್ಲು ವಿದ್ಯೆ, ಕುದುರೆ ಸವಾರಿ ಮುಂತಾದ ವಿದ್ಯೆಗಳನ್ನು ಕಲಿತರು. ಜೊತೆಗೆ ವೇದ, ಧರ್ಮಗ್ರಂಥಗಳನ್ನು ಅಭ್ಯಾಸ ಮಾಡಿ ಜ್ಞಾನವಂತರು ಎನಿಸಿಕೊಂಡರು. ಪ್ರಜೆಗಳ ಹಿತಕ್ಕಾಗಿ ಏನೆಲ್ಲಾ ಮಾಡಬೇಕು ಎಂಬುದನ್ನು ಗುರುಗಳಿಂದ ಕಲಿತುಕೊಂಡರು. ನಾಲ್ವರೂ ಗುರು ಹಿರಿಯರಲ್ಲಿ ಗೌರವ, ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು. ಹಾಗೆಯೇ ರಾಜ್ಯದ ಜನರ ಪ್ರೀತಿ ವಿಶ್ವಾಸವನ್ನು ಗಳಿಸಿಕೊಂಡರು.

ಒಂದು ದಿನ ಆಸ್ಥಾನಕ್ಕೆ ಮಹರ್ಷಿ ವಿಶ್ವಾಮಿತ್ರರು ಆಗಮಿಸಿದರು. ದಶರಥನು ಭಕ್ತಿ ಗೌರವದಿಂದ ಅವರನ್ನು ಸ್ವಾಗತಿಸಿದನು. ಬಗೆ ಬಗೆಯಲ್ಲಿ ವಿಶ್ವಾಮಿತ್ರರನ್ನು ಸತ್ಕರಿಸಿದನು. "ಮಹರ್ಷಿವರ್ಯರೇ, ನಿಮ್ಮ ಭೇಟಿಯಿಂದ ನನಗೆ ಬಹಳ ಸಂತೋಷವಾಯಿತು. ನಿಮ್ಮ ಭೇಟಿಯ ಉದ್ದೇಶವನ್ನು ದಯವಿಟ್ಟು ತಿಳಿಸಿ , ನಿಮ್ಮ ಬೇಡಿಕೆಯನ್ನು ನಿಷ್ಠೆಯಿಂದ ಪೂರೈಸುವೆ." ಎಂದು ದಶರಥನು ವಿಶ್ವಾಮಿತ್ರರಲ್ಲಿ ಹೇಳಿದನು.



ದಶರಥನ ಮಾತಿನಿಂದ ವಿಶ್ವಾಮಿತ್ರರು ಸಂತಸಗೊಂಡರು. " ದಶರಥ! ನಿನ್ನ ಸತ್ಕಾರದಿಂದ ನಾನು ಬಹಳ ಪ್ರಸನ್ನನಾಗಿರುವೆನು. ನೀನು ಕೊಟ್ಟ ಮಾತಿಗೆ ತಪ್ಪುವವನಲ್ಲ ಎಂದು ನಾನು ತಿಳಿದಿರುವೆ. ಅದಕ್ಕಾಗಿ ನಾನು ನಿನ್ನ ಬಳಿಗೆ ಬಂದಿರುವೆ. ನಾನು ಯಜ್ಞವೊಂದನ್ನು ಮಾಡಲು ಹೊರಟಾಗ, ಮಾರೀಚ ಮತ್ತು ಸುಬಾಹು ಎನ್ನುವ ಇಬ್ಬರು ರಾಕ್ಷಸರು ಯಜ್ಞಕುಂಡಕ್ಕೆ ರಕ್ತ ಮಾಂಸವನ್ನು ಸುರಿದು ಯಜ್ಞವನ್ನು ಹಾಳುಗೆಡವಿದರು. ಈ ರಾಕ್ಷಸರನ್ನು ಕೊಲ್ಲದೆ ಯಜ್ಞ ಮಾಡುವಂತಿಲ್ಲ . ಪರಾಕ್ರಮಿಯಾದ ನಿನ್ನ ಮಗ ರಾಮ ರಾಕ್ಷಸರನ್ನು ಖಂಡಿತವಾಗಿ ಕೊಲ್ಲಬಲ್ಲ. ಆದ್ದರಿಂದ ದಯವಿಟ್ಟು ಅವನನ್ನು ನನ್ನೊಂದಿಗೆ ಕಳುಹಿಸಿಕೊಡು. ಯಜ್ಞ ಮುಗಿದ ತಕ್ಷಣ ಅವನನ್ನು ಅಯೋಧ್ಯೆಗೆ ಕಳುಹಿಸುವೆ. ರಾಜ ದಶರಥನು ಮಹರ್ಷಿಯ ಬೇಡಿಕೆಯನ್ನು ಕೇಳಿ ಅಧೀರನಾದನು. ಇನ್ನೂ ಬಾಲಕನಾಗಿರುವ ರಾಮನಿಗೆ ರಾಕ್ಷಸರ ವಿರುದ್ಧ ಹೋರಡಲು ಸಾಧ್ಯವೇ ಎಂದು ಅವನ ಮನ ಅಳುಕಿತು. ರಾಮನ ಬದಲಾಗಿ ಸೇನೆಯನ್ನು ಕಳುಹಿಸುತ್ತೇನೆ ಎಂದು ದಶರಥನು ವಿಶ್ವಾಮಿತ್ರರಲ್ಲಿ ಬೇಡಿಕೊಂಡನು.

ದಶರಥನ ಮಾತಿನಿಂದ ವಿಶ್ವಾಮಿತ್ರರಿಗೆ ಕೋಪ ಬಂದಿತು. "ರಾಜನೇ, ನೀನು ಕೊಟ್ಟ ಮಾತನ್ನು ತಪ್ಪುತ್ತಿರುವೆ. ರಾಮನ ಹೊರತಾಗಿ ನನಗೆ ಬೇರೆ ಯಾರೂ ಬೇಡ." ಎಂದು ಹೇಳುತ್ತಾ ಆಸ್ಥಾನದಿಂದ ಹೊರಟರು. ಆಗ ವಸಿಷ್ಠರು ದಶರಥನನ್ನು ಸಮಾಧಾನ ಪಡಿಸಿ, "ರಾಮನನ್ನು ಕಳುಹಿಸಿಕೊಟ್ಟಲ್ಲಿ ಚಿಕ್ಕಂದಿನಲ್ಲಿಯೇ ರಾಕ್ಷಸರೊಂದಿಗೆ ಕಾದಾಡಲು ಅವನು ಕಲಿತಂತಾಗುತ್ತದೆ. ಆದ್ದರಿಂದ ಕಳುಹಿಸಿಕೊಡಿ "ಎಂದು ವಸಿಷ್ಠರು ದಶರಥನಲ್ಲಿ ನುಡಿದರು.

ದಶರಥನು ರಾಮ ಮತ್ತು ಲಕ್ಷ್ಮಣರನ್ನು ಆಶೀರ್ವದಿಸಿ ವಿಶ್ವಾಮಿತ್ರರೊಡನೆ ಕಳುಹಿಸಿಕೊಟ್ಟನು. ಮೊದಲು ವಿಶ್ವಾಮಿತ್ರರು ಮತ್ತು ರಾಜಕುಮಾರರು ಕಾಲು ನಡಿಗೆಯಲ್ಲಿ ತಮ್ಮ ಪಯಣ ಮುಂದುವರಿಸಿದರು.



ಮೊದಲು ಸರಯೂ ನದಿಯನ್ನು ದಾಟಿ ಬಳಿಕ ಗಂಗಾನದಿಯನ್ನೂ ದಾಟಿಕೊಂಡು ಮುಂದೆ ಸಾಗಿದರು. ಬಹಳ ದಿನಗಳ ಪ್ರಯಾಣದ ಬಳಿಕ ಅವರು ದಟ್ಟವಾದ ಅರಣ್ಯವನ್ನು ಪ್ರವೇಶಿಸಿದರು. ಆ ಕಾಡಿನಲ್ಲಿ ತಾರಕ ಎಂಬ ರಾಕ್ಷಸಿಯನ್ನು ವಿಶ್ವಾಮಿತ್ರರ ಹೇಳಿಕೆಯಂತೆ ರಾಮನು ಕೊಂದುಹಾಕಿದನು. ವಿಶ್ವಾಮಿತ್ರರು ರಾಮನಿಗೆ ಹಲವಾರು ಶಕ್ತಿಶಾಲಿ ಆಯುಧಗಳನ್ನು ಕಾಣಿಕೆಯಾಗಿ ನೀಡಿದರು. ಮೂವರು ಪ್ರಯಾಣ ಮುಂದುವರಿಸಿ ಯಜ್ಞದ ಸ್ಥಳಕ್ಕೆ ಬಂದರು. ಮರುದಿನ ಬೆಳಿಗ್ಗೆ ಯಜ್ಞ ಪ್ರಾರಂಭವಾಯಿತು. ರಾಮ ಲಕ್ಷ್ಮಣರಿಬ್ಬರೂ ಯಜ್ಞದ ಕಾವಲುಗಾರರಾದರು. ಯಜ್ಞದ ಕೊನೆಯ ದಿನ ಆಗಸದಲ್ಲಿ ರಾಕ್ಷಸಾ ಆರ್ಭಟ ಕೇಳಿ ಬಂತು. ಮಾರೀಚ ಮತ್ತು ಸುಬಾಹು ರಕ್ತ, ಮಾಂಸದ ಗಡಿಗೆಯನ್ನು ಹಿಡಿದು ಯಜ್ಞಕುಂಡದ ಕಡೆಗೆ ಬರುತ್ತಿದ್ದರು. ರಾಮ, ಮಾರೀಚ ಮತ್ತು ಸುಬಹುವಿನ ಕಡೆಗೆ ಬಾಣವನ್ನು ಪ್ರಯೋಗಿಸಿದನು. ರಾಮನು ಹೊಡಿದ ಬಾಣದಿಂದ ಮಾರೀಚ ದೂರದ ಸಮುದ್ರಕ್ಕೆ ಹೋಗಿ ಬಿದ್ದ. ಸುಬಾಹು ಬೆಂಕಿಯ ಉಂಡೆಯಾಗಿ ಉರಿದು ಬಿದ್ದ. ಎಲ್ಲಾ ಮುನಿವರ್ಯರು ಸಂತೋಷದಿಂದ ಯಜ್ಞವನ್ನು ಪೂರ್ಣಗೊಳಿಸಿದರು.ಯಜ್ಞ ಮುಗಿದ ಬಳಿಕ ವಿಶ್ವಾಮಿತ್ರರು ರಾಮ ಲಕ್ಷ್ಮಣರೊಡನೆ ಮಿಥಿಲಾ ನಗರದತ್ತ ಪ್ರಯಾಣ ಬೆಳೆಸಿದರು.

**ಮುಂದುವರಿಯುವುದು...**

ಮಾಹಿತಿ ಸಂಗ್ರಹ – ಗೂಗಲ್

## ಶಾರ್ಲೆಟ್ ನಲ್ಲಿ ಕನ್ನಡಿಗರನ್ನು ಒಟ್ಟುಗೂಡಿಸಿದ ಅಪ್ಪಣ್ಣ ಗೌಡ ಪಾಟೀಲ್ ಅವರೊಂದಿಗೆ ಒಂದು ಸಂಜೆ : ಪ್ರಕೃತಿ ಉಪಾಧ್ಯ



ನನ್ನ ಹೆಸರು ಅಪ್ಪಣ್ಣ ಗೌಡ ಪಾಟೀಲ್, ಮೂಲತಃ ಬೆಳಗಾವಿಯವರು ಬೆಳಗಾವಿಯ GSS ಕಾಲೇಜಿನಲ್ಲಿ BSc ಮಾಡಿ, ಹಾಸನದ Malnad collage of Engineering ನಲ್ಲಿ MCA ಮಾಡಿದ್ದೇನೆ. ಅಮೆರಿಕಾಗೆ ಬಂದು 21 ವರುಷಗಳಾದವು. ಶಾರ್ಲೆಟ್ ಗೆ ಬಂದು 13 ವರ್ಷಗಳಾದವು. ನನ್ನ ಪತ್ನಿ ಗಾಯತ್ರಿ ಹಾಗೂ ಮೂರು ಮಕ್ಕಳ ಜೊತೆ ಸೌತ್ ಶಾರ್ಲೆಟ್ನ ಸೌತ್ ಹ್ಯಾಪ್ಟನ್ ಸಬ್ ಡಿವಿಷನ್ ನಲ್ಲಿ ವಾಸವಾಗಿರುತ್ತೇವೆ.

ಕ್ಯಾರೋಲೈನ ಕನ್ನಡ ಬಳಗ , ಜಮ್ಮ ಜಮ್ಮ ಫೌಂಡೇಶನ್ ನಲ್ಲಿ ತೊಡಗಿಸಿಕೊಂಡು ಗೆಳೆಯರೆಲ್ಲರ ಜೊತೆಗೂಡಿ ಕನ್ನಡ ಮತ್ತು ಕರ್ನಾಟಕಕ್ಕೆ ನಮ್ಮ ಅಳಿಲು ಸೇವೆ ಮಾಡುತ್ತಿದ್ದೇವೆ. ಸದ್ಯಕ್ಕೆ Novant Health Care ನಲ್ಲಿ ಕೆಲಸ ಮಾಡುತ್ತಿದ್ದೇನೆ. ನನಗೆ ಬ್ಯಾಡ್ಮಿಂಟನ್ ಆಡೋದು ಅಂದ್ರೆ ತುಂಬಾ ಇಷ್ಟ. ಹಾಗೆಯೇ ಸಮಯವಿದ್ದಾಗ ಹಾಡುವ , ಓದುವ ಹವ್ಯಾಸ ಕೂಡ ಇದೆ.




**ಪ್ರಶ್ನೆ** : ನೀವು ೨೦೦೯ ರಲ್ಲಿ ಕ್ಯಾರೊಲೈನ ಕನ್ನಡ ಬಳಗದ ಅಧ್ಯಕ್ಷರು ಆಗಿದ್ರಿ. ನೀವು ಕ್ಯಾರೋಲೈನ ಕನ್ನಡ ಬಳಗದ ಮೊದಲ ಅಧ್ಯಕ್ಷರಾ?
**ಉತ್ತರ:** ಹೌದು, ನಾನು ಮೊದಲ ಅಧ್ಯಕ್ಷರು.
**ಪ್ರಶ್ನೆ ೨:** ಆವಾಗ ಶಾರ್ಲೆಟ್ ನಲ್ಲಿ ತುಂಬಾ ಕನ್ನಡದವರು ಇದ್ದಿದ್ರಾ?
**ಉತ್ತರ**: ತುಂಬಾ ಅಂದ್ರೆ ಸುಮಾರು ೩೦ ಫ್ಯಾಮಿಲಿಗಳು ಇದ್ದವು.
**ಪ್ರಶ್ನೆ :** ಅವರೆಲ್ಲರನ್ನೂ ಹೇಗೆ ಒಟ್ಟುಗೂಡಿಸಿದಿರಿ.
**ಉತ್ತರ**: ಹೇಗೆಂದರೆ, ಹಿಂದೂ ಸೆಂಟರ್ ದೇವಸ್ಥಾನದಲ್ಲಿ ಸುಮಾರು ಜನ ಪರಿಚಯ ಆಯ್ತು ನಮಗೆ. ರಾಜ್ ಕುಲಗೊಡ್, ಜಯರಾಜ್ ಕಲ್ಮಠ್, ಗೋಪಿನಾಥ್ ಗಲಗಲಿ, ಅರ್ಚನ ಶ್ರೀಶೈಲ, ನಯನ ಕಣಬೂರು, ಮಂಜುನಾಥ ಅನಂತರಾಮಯ್ಯ, ಇವರೆಲ್ಲಾ ಹಾಗೆ ಹಿಂದೂ ಸೆಂಟರಲ್ಲಿ ಕನ್ನಡದವರು ಅಂತ ಪರಿಚಯ ಆದ ಮೇಲೆ, ನಾವೆಲ್ಲಾ ಕೂಡಿ ಬಿಟ್ಟು ಕ್ಯಾರೋಲೈನ ಕನ್ನಡ ಬಳಗ ಅಂತ ಒಂದು ಬಳಗ ಮಾಡಿದ್ದು. ಹಾಗೇನೇ ೨೦೦೮ ರಲ್ಲಿ ಅವರವರ ಪರಿಚಯದವರ ಇಮೇಲ್ ತಗೊಂಡು ೩೫ ಇಮೇಲ್ ಗಳು ಕಲೆಕ್ಟ್ ಆದವು. ಆಗ WhatsApp ಇರಲಿಲ್ಲ. ಇಮೇಲ್ ಅಥವಾ phone ಇಂದ ಎಲ್ಲರನ್ನು ಸೇರಿಸಿದೆವು. ಒಂದು ಕೋರ್ ಗ್ರೂಪ್ ಆಯ್ತು.
**ಪ್ರಶ್ನೆ:** ಕ್ಯಾರೋಲೈನ ಕನ್ನಡ ಬಳಗ ಕ್ಕೆ ತುಂಬಾ ಸಮಯವನ್ನು ಕೊಟ್ಟಿದ್ದೀರಿ ಅಥವಾ volunteer ಮಾಡಿದ್ದೀರಿ. ನಿಮ್ಮ ಅನುಭವಗಳೇನು?
**ಉತ್ತರ** : ಅನುಭವ ಅಂದ್ರೆ, ಸ್ಟಾರ್ಟಿಂಗ್ ನಲ್ಲಿ ಜನರನ್ನು ಸೇರಿಸಿ ಅವರಿಗೆಲ್ಲಾ ಒಪ್ಪಿಸಿ, ಸಂಘ ಮಾಡೋಣ ಬನ್ನಿ ಅಂತ ಕರೆದುಬಿಟ್ಟು, ಸಂಘ ಮಾಡಿದ್ವಿ. It was good. ಎಲ್ಲರೂ excited ಆಗಿದ್ದರು, ತುಂಬಾ ಚೆನ್ನಾಗಿತ್ತು.
**ಪ್ರಶ್ನೆ:** ನಿಮಗೆ ಚಾರಿಟಿಯಲ್ಲಿ ಆಸಕ್ತಿ ಯಾವಗ ಬಂತು?
**ಉತ್ತರ** : ನನಗೆ ಚಾರಿಟಿಯಲ್ಲಿ ಆಸಕ್ತಿ ಮೊದಲಿಂದ ಇತ್ತು. ಅದಕ್ಕೊಂದು vehicle ಇರಲಿಲ್ಲ. ಅಂದ್ರೆ ಅದಕ್ಕೊಂದು ಸಂಸ್ಥೆ ಇರಲಿಲ್ಲ. ಆದರೆ ಮೊದಲಿಂದ ಸಹಾಯ ಮಾಡುವ ಮನೋಭಾವ ಇತ್ತು. ಜಮ್ಮ ಜಮ್ಮ ಫೌಂಡೇಶನ್ ಬಗ್ಗೆ ಹೇಳೋದಾದ್ರೆ. ಎಲ್ಲಾ ಫ್ರೆಂಡ್ಸ್ ಕೂಡಿಕೊಂಡು ಮಾಡಿದ್ರಲ್ಲ. ನಾನು ಅದರಲ್ಲಿ involve ಆದೆ. ನನಗೆ ಒಂದು vehicle ಸಿಕ್ಕಿತ್ತು. ನನಗೆ ಜನರಿಗೆ approach ಮಾಡೋಕೆ ಸುಲಭವಾಯ್ತು.
**ಪ್ರಶ್ನೆ:** ಜಮ್ಮ ಜಮ್ಮ ಫೌಂಡೇಶನ್ ಯಾವ ವರ್ಷದಲ್ಲಿ ಪ್ರಾರಂಭಿಸಿದಿರಿ?
**ಉತ್ತರ:** ಜಮ್ಮ ಜಮ್ಮ ಫೌಂಡೇಶನ್ ೨೦೧೫ ರ ಆಗಸ್ಟ್, ಸೆಪ್ಟೆಂಬರ್ ನಲ್ಲಿ.



## ಶಾರ್ಲೆಟ್ ನಲ್ಲಿ ಕನ್ನಡಿಗರನ್ನು ಒಟ್ಟುಗೂಡಿಸಿದ ಅಪ್ಪಣ್ಣ ಗೌಡ ಪಾಟೀಲ್ ಅವರೊಂದಿಗೆ ಒಂದು ಸಂಜೆ : ಪ್ರಕೃತಿ ಉಪಾಧ್ಯ

**ಪ್ರಶ್ನೆ** : ಜಮ್ಮ ಜಮ್ಮ ಫೌಂಡೇಶನ್ ಗೆ ಏನು ಇನ್ಸ್ಪಿರೇಷನ್ ?

**ಉತ್ತರ**: ಜಮ್ಮ ಜಮ್ಮ ಫೌಂಡೇಶನ್ ಮೂಲ ಅಂದ್ರೆ " ಜಮ್ಮ ಜಮ್ಮ ಬಾಯ್ಸ್ " ಅಂತ ಹೇಳುತ್ತಾರೆ. ನಮ್ಮ ರಮೇಶ್ ಚನ್ನದ್ ಮತ್ತು ಸಂಗಡಿಗರು ಇದ್ದಾರಲ್ಲಾ ಅವರೆಲ್ಲಾ ಸೇರಿಕೊಂಡು ೨೦೧೨- ೨೦೧೩ ರಿಂದ CKB ಯಲ್ಲಿ ಡಾನ್ಸ್ ಮಾಡ್ತಾ ಇದ್ರು. ಜಮ್ಮ ಜಮ್ಮ ಹಾಡಿಗೆ ಡಾನ್ಸ್ ಮಾಡಿ ಅವರೆಲ್ಲಾ ಜಮ್ಮ ಜಮ್ಮ ಬಾಯ್ಸ್ ಆಗಿ ಗುರುತಿಸಲ್ಪಟ್ಟರು. ಅವರೆಲ್ಲಾ ಕೂಡಿಕೊಂಡು ಪಾರ್ಕ್ನಲ್ಲಿ ಮೀಟ್ ಮಾಡಿ , ಯಾಕೆ ನಾವು ಒಂದು ಸಂಸ್ಥೆಯನ್ನು ತೆರೆದು ಕರ್ನಾಟಕದ ಬಡ ಮಕ್ಕಳಿಗೆ ಸಹಾಯ ಮಾಡಬಾರದು " ಅಂತ ಯೋಚಿಸಿದರು. ಆಮೇಲೆ ೮-೧೦ ಜನ, ರಮೇಶ್, ನವೀನ, ಅಭಯ್ ಮತ್ತು ಎಲ್ಲ ಸಂಗಡಿಗರು ಕೂಡಿ ಒಂದು ಸಂಸ್ಥೆ ಅಂತ ತೆಗೆದು ಕರ್ನಾಟಕದ ಬಡ ಮಕ್ಕಳಿಗೆ ಸಹಾಯ ಮಾಡೋಣ ಅಂತ ತೀರ್ಮಾನಿಸಿದರು.

**ಪ್ರಶ್ನೆ:** ನಿಮ್ಮ ಜಮ್ಮ ಜಮ್ಮ ಫೌಂಡೇಶನ್ ಇದುವರೆಗೆ ಎಷ್ಟು ಡೊನೇಷನ್ ಮಾಡಿದೀರಾ?

**ಉತ್ತರ:** ನಾವು ಇದುವರೆಗೆ $೪೫೦೦೦ collection ಅಂದ್ರೆ ಫಂಡ್ ರೈಸ್ ಮಾಡಿದೀವಿ. ಅದರಲ್ಲಿ $೩೫೦೦೦ ಡೊನೇಷನ್ ಮಾಡಿದೀವಿ.

**ಪ್ರಶ್ನೆ:** ನೀವು ಯಾರಿಗೆ ಡೊನೇಷನ್ ಮಾಡಬೇಕು ಅಂತ ಹೇಗೆ ನಿಶ್ಚಯಿಸುತ್ತೀರಾ?

**ಉತ್ತರ:** ಹೇಗೆಂದ್ರೆ, ನಮ್ಮ ಜಮ್ಮ ಜಮ್ಮ ಫೌಂಡೇಶನ್ ನ ನಾವು 501c3 ಚಾರಿಟೇಬಲ್ (Nonprofit organization certificate) tax exempt status ಅಂತ IRS ಇಂದ ತಗೊಂಡಿದೀವಿ. ಯಾರೇ ನಮಗೆ ಡೊನೇಟ್ ಮಾಡಿದ್ರೂ ಆ ಅಮೌಂಟ್ taxable ಆಗೋಲ್ಲ. IRS ಗೆ ಫೈಲ್ ಮಾಡುವಾಗ ನಾವು ಯಾವ area ದಲ್ಲಿ donate ಮಾಡುತೀವಿ ಅಂತ ಹೇಳಬೇಕು. ನಾವೆಲ್ಲಾ ಸೇರಿ Education area ಅಂತ ಸೆಲೆಕ್ಟ್ ಮಾಡಿದೆವು. ನಾವೀಗ ಅದೇ area ದಲ್ಲೇ ಮ್ಯಾಕ್ಸಿಮಮ್ ಮೊರೆ ತಂ ೯೦% ನಮ್ಮ ದುಡ್ಡನ್ನು educationಗೆ ಕೊಡುತ್ತೇವೆ.

**ಪ್ರಶ್ನೆ**: ನೀವು ಯಾವ ರೀತಿ ಡೊನೇಷನ್ ಗೆ fundraise ಮಾಡುತೀರಾ?

**ಉತ್ತರ:** ನಮ್ಮದು ಮುಖ್ಯವಾಗಿ ಒಂದು WhatsApp ಗ್ರೂಪ್ ಇದೆ. ಅದರಲ್ಲಿ ೮೦-೯೦ member ಇದ್ದಾರೆ. ಬಹಳಷ್ಟು ಜನ ಗೆನಮ್ಮ ಕ್ಯಾರೋಲೈನ ಕನ್ನಡ ಬಳಗದವರೇ. ಸ್ವಲ್ಪ ಹೊರಗಿನವರೂ ಇದ್ದಾರೆ. ನಾವು ಮೇ , ಜೂನ್ ತಿಂಗಳಲ್ಲಿ ೭೫ ವಿದ್ಯಾರ್ಥಿನಿಯರಿಗೆ ಧನ ಸಹಾಯ ಮಾಡುತ್ತೇವೆ. $೫೦ ಕೊಟ್ಟರೆ ಒಬ್ಬ ವಿಧ್ಯಾರ್ಥಿಯ ಒಂದು ವರ್ಷದ fee ಗೆ ಆಗುತ್ತದೆ. ಹಾಗೇನೆ ಜಮ್ಮ ಜಮ್ಮ ಫೌಂಡೇಶನ್ ಇಂದ annual day ಮಾಡುತ್ತೇವೆ. ಆಗ ಬಹಳಷ್ಟು ಜನ ನಮಗೆ cheque, online ಡೊನೇಷನ್ ಕೊಡುತ್ತಾರೆ. ಕೆಲವರು ಮಕ್ಕಳ ಬರ್ತ್ಡೇಗೆ ಡೊನೇಷನ್ ಕೊಡುತ್ತಾರೆ. ಇನ್ನು ಕೆಲವು corporate ಕಂಪನಿಗಳು ಅವರ employee ಕೊಟ್ಟ ಡೊನೇಷನ್ ಗೆ ಮ್ಯಾಚ್ ಮಾಡುತ್ತಾರೆ. ಕಳೆದ ವರ್ಷ ಸುಮಾರು $೬೦೦೦ ಮ್ಯಾಚಿಂಗ್ ಬಂತು. ಇದೇ ರೀತಿ ಡಿಫರೆಂಟ್ area ಯಿಂದ fundraise ಮಾಡುತೀವಿ.

**ಪ್ರಶ್ನೆ**: ಜಮ್ಮ ಜಮ್ಮ ಫೌಂಡೇಶನ್ ಗೆ ನಾನು ಡೊನೇಟ್ ಮಾಡಬೇಕು ಅಂದ್ರೆ ಹೇಗೆ ಮಾಡಬೇಕು?

**ಉತ್ತರ:** ಜಮ್ಮ ಜಮ್ಮ ಫೌಂಡೇಶನ್ website ಇದೆ. JJFdn.org. ಅಲ್ಲಿ donate ಬಟನ್ ಇದೆ. ಅದನ್ನು ಕ್ಲಿಕ್ ಮಾಡಿದ್ರೆ it will take you to the link. Also, you can donate using Jammajammafoundation@gmail.com. ಆಮೇಲೆ amazon ನಲ್ಲಿ ಒಂದು Smile.Amazon.com ಅಲ್ಲಿಂದ ನೀವು item purchase ಮಾಡಿದ್ರೆ amazon ಅವರು JJF ಗೆ ೦.೫% of total sale amount ಕೊಡುತ್ತಾರೆ.

**ಪ್ರಶ್ನೆ:** ನಮ್ಮ ಚಿಗುರು ಕನ್ನಡ ಕ್ಲಾಸ್ ಮಕ್ಕಳಿಗೆ ಯಾಕೆ ಚಾರಿಟಿ ವರ್ಕ್ ಮಾಡಬೇಕು ಅಂತ ಹೇಳುತೀರಾ?

**ಉತ್ತರ:** ಚಾರಿಟಿ ವರ್ಕ್, ನಾವು ಒಂದು ಸಮಾಜದಲ್ಲಿ ಇರುತೀವಿ. ನಮ್ಮ ಸುತ್ತ ಮುತ್ತ ಇರೋರು ಚೆನ್ನಾಗಿದ್ರೆ ಅದು ನಮಗೂ ಒಂದು ವಿಧದಲ್ಲಿ reflect ಆಗುತ್ತೆ. ಯಾರದ್ರೂ ಬಡವರನ್ನು ನೋಡಿದ್ರೆ, ಬೇಕಾದವರಿಗೆ ಸಹಾಯ ಮಾಡುವುದರಿಂದ ನಮಗೂ ಸಮಾಜಕ್ಕೂ ಒಳ್ಳೇದು. ನಾವೆಲ್ಲಾ ಮೂಲವಾಗಿ ಕರ್ನಾಟಕದಿಂದ ಬಂದಿದೀವಿ .ನಾವು ಬಡತನ ನೋಡಿದೀವಿ. ಎಜುಕೇಶನ್ ಇಲ್ಲದೇ ಹೋದ್ರೆ ಅಥವಾ ಧನ ಸಹಾಯ ಇಲ್ಲದಾಗ ಯಾವ ತರಹ ಅವರ ಜೀವನ ಚೇಂಜ್ ಆಗುತ್ತೆ ಅಂತ ನೋಡಿದೀವಿ. ಇಲ್ಲಿಯೂ ಅಮೇರಿಕಾದಲ್ಲಿಯೂ ಬಡತನ ಇದೆ. ಯಾವಾಗ ನೀವು ಹೆಲ್ಪ್ ಮಾಡುತೀರ ಆವಾಗ ಒಂದು ರೀತಿಯ satisfaction ಸಿಗುತ್ತೆ. You are helping, It's for a good cause. It's a good thing, ಇದನ್ನು ಬೆಳೆಸಿಕೊಳ್ಳಿ.

**ಪ್ರಶ್ನೆ:** ನಮ್ಮ ಚಿಗುರು ಕನ್ನಡ ಕ್ಲಾಸ್ ಮಕ್ಕಳಿಗೆ ಕನ್ನಡ ಯಾಕೆ ಕಲೀಬೇಕು ಮತ್ತು ಯಾಕೆ ಮಾತಾಡಬೇಕು ಅಂತ ಹೇಳುತೀರಾ?

**ಉತ್ತರ:**ಕನ್ನಡ ಸಂಸ್ಕೃತಿ ,ಕನ್ನಡ ಕಲೆ ಇವೆಲ್ಲವನ್ನೂ ನಾವು ಮುಂದಿನ ಜನಾಂಗಕ್ಕೆ ತಗೊಂಡು ಹೋಗಬೇಕು. ಅಂದ್ರೆ ನಮ್ಮ ಭಾಷೆಯ ಬಗ್ಗೆ ನಮಗೆ ಅಭಿಮಾನ ಇರಬೇಕು. ಮೊದಲು ಆ ಭಾಷೆಯನ್ನು ಕಲಿಯಬೇಕು. ಕನ್ನಡ ಭಾಷೆಯನ್ನು ಕಲಿತ್ರೆ ನಮ್ಮ ಸಾಹಿತ್ಯ, ನಮ್ಮ ನಾಡಿನ ಸಂಸ್ಕೃತಿ, ನಾಡಿನ ನಡೆ – ನುಡಿಯ ಬಗ್ಗೆ ಕೂಡ ಕಲಿಯಬಹುದು. ಕನ್ನಡ ಭಾಷೆಯೇ ಇಲ್ಲ ಅಂದ್ರೆ ಇದಾವದಕ್ಕೂ ಒಂದು ಅವಕಾಶನೇ ಇಲ್ಲ ಅಲ್ವಾ?



**ಪ್ರಾಣಿ ಪ್ರಪಂಚ : ಮಹಿತ್ ಗೌಡ**



## ಏಷ್ಯಾ/ಭಾರತದ ಆನೆ:

ಏಷ್ಯಾದ ಆನೆ ಅಥವಾ ಭಾರತದ ಆನೆ ಆಫ್ರಿಕನ್ಆನೆಗಿಂತ ಗಾತ್ರದಲ್ಲಿ ಸಣ್ಣದು. ಅಲ್ಲದೆ ಗಂಡಾನೆಗಳು ಮಾತ್ರ ದೊಡ್ಡದಾದ ದಂತಗಳನ್ನಹೊಂದಿರುತ್ತವೆ. ಇಂದು ಭೂಮಿಯ ಮೇಲೆ ಸುಮಾರು ೬೦,೦೦೦ ಮಾತ್ರ ಏಷ್ಯಾದ ಆನೆಗಳು ಇವೆ. ಇವುಗಳ ಪೈಕಿ ೩೮,೦೦೦ದಿಂದ ೫೩,೦೦೦ದಷ್ಟು ಆನೆಗಳು ಕಾಡಿನಲ್ಲೂ ಮತ್ತು ಸುಮಾರು ೧೫,೦೦೦ ದಷ್ಟು ಆನೆಗಳು ಪಳಗಿಸಲ್ಪಟ್ಟು ನಾಡಿನಲ್ಲೂ ಇವೆಯೆಂದು ಒಂದುಅಂದಾಜು.

**ಆಹಾರ**: ಆನೆಗಳು ಸಂಪೂರ್ಣ ಸಸ್ಯಾಹಾರಿಗಳು. ದಿನದಲ್ಲಿ ೧೬ಗಂಟೆಗಳಷ್ಟು ಸಮಯವನ್ನು ಆಹಾರಸಂಗ್ರಹಣೆಯಲ್ಲಿಯೇ ಕಳೆಯುತ್ತವೆ. ಆನೆಗಳ ಆಹಾರದಲ್ಲಿ ಅರ್ಧಭಾಗದಷ್ಟು ಹುಲ್ಲು ಉಳಿದಂತೆಎಲೆಗಳು, ಚಿಗುರು, ಬೇರುಗಳು ಮತ್ತು ಸ್ವಲ್ಪ ಪ್ರಮಾಣದಲ್ಲಿ ಹಣ್ಣುಗಳು ಬೀಜಗಳು ಹಾಗೂ ಹೂವುಗಳು ಇರುತ್ತವೆ.

**ಆನೆಗಳು ಮತ್ತು ಪರಿಸರ**: ಆನೆಗಳು ಹಲವು ಬಾರಿ ಎಲೆಗಳನ್ನು ತಿನ್ನುವುದಕ್ಕೋಸ್ಕರ ಮರದ ರೆಂಬೆಗಳನ್ನು ಅಥವಾ ಇಡೀ ಮರವನ್ನೇ ಬೇರುಸಮೇತ ಕಿತ್ತೊಗೆಯುವುದರಿಂದಾಗಿ ಆ ಸ್ಥಳದಲ್ಲಿ ಹೊಸದಾಗಿ ಬೇರೆ ಗಿಡಮರಗಳು ಬೆಳೆಯಲು ಅನುವಾಗುವುದು. ಇದರಿಂದ ಆನೆಗೆ ಮತ್ತು ಇತರ ಜೀವಿಗಳಿಗೆ ಹೆಚ್ಚಿನ ಪೋಷಕಾಂಶವುಳ್ಳ ಆಹಾರ ದೊರೆಯುವ ಸಾಧ್ಯತೆ ಹೆಚ್ಚುವುದು.ಆನೆಗಳು ತಾವು ನಡೆದಾಡುವ ಹಾದಿಯಲ್ಲಿ ಗಿಡಮರಗಳನ್ನು ನಿವಾರಿಸಿ ಕಾಲುದಾರಿಯನ್ನು ನಿರ್ಮಿಸುವುವು. ಆನೆಗಳನ್ನು ಇತರ ಹಲವು ಜೀವಿಗಳು ಅವಲಂಬಿಸಿರುತ್ತವೆ. ಉದಾಹರಣೆಗೆ ಗೆದ್ದಲು.

**ದಂತಗಳು:**

ಆನೆಯ ಬಾಯಿಯ ಮೇಲ್ದವಡೆಯ ಎರಡುಕೋರೆಹಲ್ಲುಗಳು ಬಾಯಿಯಿಂದ ಹೊರಚಾಚಿ ದೀರ್ಘವಾಗಿ ಬೆಳೆದು ದಂತ(ಆನೆಕೊಂಬು) ಎಂಬ ಹೆಸರು ಪಡೆದಿವೆ. ಆನೆಗಳ ದಂತಗಳು ಜೀವನಪರ್ಯಂತ ಬೆಳೆಯುತ್ತಲೇ ಇರುತ್ತವೆ. ವಯಸ್ಕ ಗಂಡಾನೆಯ ದಂತ ವರ್ಷಕ್ಕೆ ೭ ಅಂಗುಲದಷ್ಟು ಬೆಳೆಯಬಲ್ಲುದು. ನೀರು,ಉಪ್ಪು ಮತ್ತು ಬೇರುಗಳನ್ನು ಪಡೆಯಲು ನೆಲವನ್ನು ಅಗೆಯುವಲ್ಲಿ ದಂತಗಳು ಆನೆಗೆ ಸಹಕಾರಿಯಾಗಿವೆ.



ಅನಾದಿಕಾಲದಿಂದಲೂ ಮಾನವನಿಗೆ ಆನೆಯು ಒಂದು ಪ್ರತಿಷ್ಠೆಯ ಸಂಕೇತವಾಗಿದೆ. ಅಂದಿನ ಭಾರತದ ಅರಸರ ಪಟ್ಟದಾನೆಯು ಸಮಾಜದಲ್ಲಿ ಅತಿ ಗೌರವಾನ್ವಿತ ಸ್ಥಾನವನ್ನು ಹೊಂದಿತ್ತು. ಸೈನ್ಯದ ಶಕ್ತಿಯು ಗಜಬಲವನ್ನು ಹೆಚ್ಚಾಗಿ ಅವಲಂಬಿಸಿತ್ತು. ಉಳಿದಂತೆ ಆನೆಯನ್ನು ಧಾರ್ಮಿಕ ಮತ್ತು ಸಾಂಸ್ಕೃತಿಕ ಉತ್ಸವಗಳಲ್ಲಿ ಬಳಸುವ ವಾಡಿಕೆ ಇಂದಿಗೂ ಇದೆ. ದಕ್ಷಿಣ ಭಾರತದ ಬಹಳಷ್ಟು ದೇವಸ್ಥಾನಗಳು ತಮ್ಮದೇ ಆನೆಯನ್ನು ಸಾಕಿಕೊಂಡಿವೆ.



**ಸಾಮಾನ್ಯ ಹೆಸರು: ಆನೆ, ಗಜ**
**ವೈಜ್ಞಾನಿಕ ಹೆಸರು: ಎಲಿಫಾಸ್ ಮ್ಯಾಕ್ಸಿಮಸ್**
**ಅಳತೆ: ೧೧ ಅಡಿ**
**ತೂಕ: ೭೦೦೦-೧೩೦೦೦ ಪೌಂಡ್ಸ್**
**ಆಯಸ್ಸು: ೬೦-೭೦ ವರ್ಷಗಳು**
**ಆಹಾರ: ಸಸ್ಯಾಹಾರಿ**

# ಚಿಣ್ಣರ ಚಿತ್ತಾರ



ಕಾಡು

ಕಾಡು, ಮರಗಳ ಸಾಂದ್ರತೆ ಹೆಚ್ಚಾಗಿ ಇರುವ ಪ್ರದೇಶ. ಕಾಡಿನಲ್ಲಿ ನಾನಾ ರೀತಿಯ ಮರಗಳು ಇರುತ್ತವೆ. ಇದರಿಂದ ನಮಗೆ ಹೂವುಗಳು, ಹಣ್ಣುಗಳು ದೊರೆಯುತ್ತದೆ. ಇಲ್ಲಿ ವಿಧವಿಧವಾದ ಬಳ್ಳಿಗಳು, ಹುಲ್ಲುಗಳು ಇರುತ್ತದೆ. ಇದರಿಂದ ಅನೇಕ ವಿಧವಾದ ಪ್ರಾಣಿ ಮತ್ತು ಪಕ್ಷಿಗಳಿಗೆ ತಂಗುದಾಣವಾಗಿದೆ. ಮಾನವರ ಬದುಕಲ್ಲಿ ಕಾಡುಗಳು ಬಹು ಮುಖ್ಯವಾದ ಪಾತ್ರ ವಹಿಸುತ್ತವೆ. ಕಾಡುಗಳು ಪರಿಸರದ ಶುದ್ಧೀಕರಣ, ಹವಾಮಾನದ ನಿಯಂತ್ರಣಕ್ಕೆ ಸಹಕಾರಿಯಾಗಿದೆ. ಅಲ್ಲದೆ ಜಲಾನಯನ ಮತ್ತು ಅನೇಕ ಜನರ ಜೀವನೋಪಾಯದ ಮೂಲವಾಗಿದೆ.

ಅಭಿಜ್ಞಾ ನಾಗೇಶ್

ಇಲಿಗೊಂದು ಮನೆ

ಇಲಿಗೊಂದು ಮನೆ ಬೇಕಾಗಿದೆ. ಬಟ್ಟಲೂ ತುಂಬ ಚಿಕ್ಕದು. ಮಂಚವೂ ಬಹಳ ದೊಡ್ಡದು. ಟಿಕ್ ಟಾಕ್ ಟಿಕ್ ಟಾಕ್ (ಶಬ್ದ). ಗಡಿಯಾರವೂ ತುಂಬ ಸದ್ದು ಮಾಡುತ್ತದೆ. ಫ್ಯಾನೂ (ಪಂಖವೂ) ಆದರಿಂದ ತಣ್ಣನೆ ಗಾಳಿ ಬೀಸುತ್ತದೆ. ಬಕೇಟೂ ಆದರೆ ತುಂಬ ನೀರು. ಬೆಕ್ಕನ ಬುಟ್ಟಿಯೂ ಬಹಳ ಅಪಾಯ. ಬೆಂಕಿಯೂ ಆದರೆ ಹತ್ತಿರ ತುಂಬಾ ಬಿಸಿ. ಕಪಾಟಿನ (ಬೀರುವಿನ) ಕೆಳಗೂ ಆಹಾ! ಇದು ಇಲಿಗೆ ಉತ್ತಮ ಜಾಗ. ಇದು ಅತಿ ಚಿಕ್ಕದೂ ಅಲ್ಲ, ದೊಡ್ಡದೂ ಅಲ್ಲ. ಇಲ್ಲಿ ಶಬ್ದವೂ ಇಲ್ಲ. ಇದು ಅತಿ ತಣ್ಣಗೂ ಇಲ್ಲ. ಇಲ್ಲಿ ನೀರೂ ಇಲ್ಲ. ಇಲ್ಲಿ ಅಪಾಯವೂ ಇಲ್ಲ. ಇಲ್ಲಿ ಬಿಸಿಯೂ ಇಲ್ಲ. ಇದು ಇಲಿಗೆ ಉತ್ತಮವಾದ ಜಾಗ.

ಸಿಹಿ ವೀರ




ಪ್ರೇರಣ ಗೌಡ



ಪ್ರದ್ಯುಮ್ನ



## ಗುಡು ಗುಡು ಗುಮ್ಮಟ : ಪಂಜೆ ಮಂಗೇಶರಾಯರು

ಕಥಾ ಸಂಕಲನ

ಒಂದು ಹಳ್ಳಿಯಲ್ಲಿ ಒಂದು ಆಡು ಇತ್ತು. ಮರಿಯನ್ನು ಬಿಟ್ಟು ಅ ಆಡು ಎಲ್ಲಿಯೂ ಹೋಗುತ್ತಿರಲಿಲ್ಲ .ತಾಯಿಯನ್ನು ಬಿಟ್ಟು ಮರಿಯು ಎಲ್ಲಿಯೂ ಹೋಗುತ್ತಿರಲಿಲ್ಲ . ಇಬ್ಬರ ನಡುವೆ ಬಹಳ ಪ್ರೀತಿ ಇತ್ತು.ಒಂದು ದಿನ ಆ ಆಡಿನ ಮರಿಯು ತನ್ನ ತಾಯಿಯ ಹತ್ತಿರ " ಅಮ್ಮಾ , ಅಮ್ಮಾ, ನಾನು ಅಜ್ಜಿಯ ಮನೆಗೆ ಹೋಗಲೋ? ಅಲ್ಲಿ ಕಡಬು ಇದೆ, ದೋಸೆ ಇದೆ , ಚಕ್ಕುಲಿ ಇದೆ, ವಡೆ ಇದೆ ಎಂದು ಹೇಳಿತು. ಅದಕ್ಕೆ ಆಡು " ಮಗೂ, ಆ ದಾರಿ ಕೆಟ್ಟದು. ಆದರೆ ದಾರಿಯಲ್ಲಿ ಹೆದರಬೇಡ. ಜೋಕೆ! " ಎಂದಿತು. ಆಡಿನ ಮರಿಯು "ಆಗಲಿ" ಎಂದು ಹೇಳಿ, ಅಜ್ಜಿಯ ಮನೆಗೆ ಹೊರತು ಹೋಯಿತು.

ಆ ದಾರಿಯಲ್ಲಿ ಒಂದು ನರಿಯು ಕೂತಿತ್ತು. ಆ ನರಿಯು ಆಡಿನ ಮರಿಯನ್ನು ಕಂಡು, ಅದನ್ನು ಅಡ್ಡ ಕಟ್ಟಿತು. ಆಗ ಆಡಿನ ಮರಿ ಅಣ್ಣಾ , ನಾನು ಹೋಗುವಾಗ ನೀನು ಯಾಕೆ ಅಡ್ಡ ಕಟ್ಟುತ್ತೀ ? ಎಂದು ಕೇಳಿತು. ಅದಕ್ಕೆ ನರಿಯು ಕಟಕಟನೆ ಹಲ್ಲುಗಳನ್ನು ಕಡಿಯುತ್ತಾ " ನಿನ್ನನ್ನು ಈಗಲೇ ಗುಳಕ್ಕನೆ ನುಂಗಿ ಬಿಡುತ್ತೇನೆ" ಎಂದು ಒದರಿತು. ಆ ಮಾತಿಗೆ ಆಡಿನ ಮರಿಯು ಹೆದರದೆ " ನರಿಯಣ್ಣಾ, ನರಿಯಣ್ಣಾ, ನಾನು ಅಜ್ಜಿಯ ಮನೆಗೆ ಹೋಗಿ , ಅಲ್ಲಿ ಕಡುಬು ತಿಂದು ಬೆಳೆದು ಬರುತ್ತೇನೆ, ಆಮೇಲೆ ನನ್ನನ್ನು ನುಂಗಬಹುದು; ಈಗ ದಾರಿ ಬಿಡು" ಎಂದು ಹೇಳಿತು. ಆಗ ನರಿಯು ದಾರಿ ಬಿಟ್ಟಿತು.ಆಡಿನ ಮರಿಯು ಮುಂದೆ ಹೋಯಿತು.

ಆ ದಾರಿಯಲ್ಲಿ ಒಂದು ಹುಲಿಯು ಕೂತಿತ್ತು. ಆ ಹುಲಿಯು ಆಡಿನ ಮರಿಯನ್ನು ಕಂಡು, ಅದನ್ನು ಅಡ್ಡ ಕಟ್ಟಿತು. ಆಗ ಆಡಿನ ಮರಿ ಅಣ್ಣಾ , ನಾನು ಹೋಗುವಾಗ ನೀನು ಯಾಕೆ ಅಡ್ಡ ಕಟ್ಟುತ್ತೀ ? ಎಂದು ಕೇಳಿತು. ಅದಕ್ಕೆ ಹುಲಿಯು ಬಾಲವನ್ನು ಬೀಸುತ್ತಾ " ನಿನ್ನನ್ನು ಈಗಲೇ ಗುಳಕ್ಕನೆ ನುಂಗಿ ಬಿಡುತ್ತೇನೆ" ಎಂದು ಒದರಿತು. ಆ ಮಾತಿಗೆ ಆಡಿನ ಮರಿಯು ಹೆದರದೆ " ಹುಲಿಯಣ್ಣಾ ಹುಲಿಯಣ್ಣಾ, ನಾನು ಅಜ್ಜಿಯ ಮನೆಗೆ ಹೋಗಿ , ಅಲ್ಲಿ ಕಡುಬು ತಿಂದು ಬೆಳೆದು ಬರುತ್ತೇನೆ, ಆಮೇಲೆ ನನ್ನನ್ನು ನುಂಗಬಹುದು; ಈಗ ದಾರಿ ಬಿಡು" ಎಂದು ಹೇಳಿತು. ಆಗ ಹುಲಿ ದಾರಿ ಬಿಟ್ಟಿತು.ಆಡಿನ ಮರಿಯು ಮುಂದೆ ಹೋಯಿತು.

ಆ ದಾರಿಯಲ್ಲಿ ಒಂದು ಸಿಂಹ ಕೂತಿತ್ತು. ಆ ಸಿಂಹವು ಆಡಿನ ಮರಿಯನ್ನು ಕಂಡು, ಅದನ್ನು ಅಡ್ಡ ಕಟ್ಟಿತು. ಆಗ ಆಡಿನ ಮರಿ ಅಣ್ಣಾ , ನಾನು ಹೋಗುವಾಗ ನೀನು ಯಾಕೆ ಅಡ್ಡ ಕಟ್ಟುತ್ತೀ ? ಎಂದು ಕೇಳಿತು. ಅದಕ್ಕೆ ಸಿಂಹವು ಕೇಸರವನ್ನುನಿಗಿರಿಸುತ್ತಾ " ನಿನ್ನನ್ನು ಈಗಲೇ ಗುಳಕ್ಕನೆ ನುಂಗಿ ಬಿಡುತ್ತೇನೆ" ಎಂದು ಒದರಿತು. ಆ ಮಾತಿಗೆ ಆಡಿನ ಮರಿಯು ಹೆದರದೆ " ಸಿಂಹಣ್ಣಾ ಸಿಂಹಣ್ಣಾ, ನಾನು ಅಜ್ಜಿಯ ಮನೆಗೆ ಹೋಗಿ , ಅಲ್ಲಿ ಕಡುಬು ತಿಂದು ಬೆಳೆದು ಬರುತ್ತೇನೆ, ಆಮೇಲೆ ನನ್ನನ್ನು ನುಂಗಬಹುದು; ಈಗ ದಾರಿ ಬಿಡು" ಎಂದು ಹೇಳಿತು. ಆಗ ಸಿಂಹವು ದಾರಿ ಬಿಟ್ಟಿತು.ಆಡಿನ ಮರಿಯು ಮುಂದೆ ಹೋಯಿತು.ಕಡೆಗೆ ಆಡಿನ ಮರಿಯು ಅಜ್ಜಿಯ ಮನೆ ಮುಟ್ಟಿತು. ಮರಿಯನ್ನು ನೋಡಿ ಅಜ್ಜಿ " ಮಗೂ , ನೀನು ಹೇಗೆ ಇದ್ದೀ? ನಿನ್ನ ಅಮ್ಮ ಹೇಗೆ ಇದ್ದಾಳೆ ? ನೀನು ಯಾಕೆ ಬತ್ತಿ ಹೋಗಿದ್ದಿ?" ಎಂದು ಕೇಳಿದಳು . ಅದಕ್ಕೆ ಆಡಿನ ಮರಿ " ಅಜ್ಜಿ, ಅಜ್ಜಿ, ನಮ್ಮ ಮನೆಯಲ್ಲಿ ಕಡುಬು ಇಲ್ಲ , ದೋಸೆ ಇಲ್ಲ , ಚಕ್ಕುಲಿ ಇಲ್ಲ, ವಡೆ ಇಲ್ಲ, ಏನು ಮಾಡಲಿ? ತಿಂಡಿ ಕೊಟ್ಟರೆ ಮೈ ತುಂಬುತ್ತದೆ" ಎಂದಿತು.

ಅದಕ್ಕೆ ಅಜ್ಜಿ 'ಓಹೋ! ಹಾಗೋ? ನಿನಗೆ ಮೈ ಬೆಳೆದರೆ , ನಿನ್ನನ್ನು ಯಾರಾದರೂ ದಾರಿಯಲ್ಲಿ ಹಿಡಿದು ತಿನ್ನಲಿಕ್ಕಿಲ್ಲವೇ?' ಎಂದು ಕೇಳಿದಳು. ಆ ಮಾತಿಗೆ ಆಡಿನ ಮರಿಯು "ನನಗೆ ಮೈ ತುಂಬಿದರೆ ನನ್ನನ್ನು ಹಿಡಿಯುವರೋ? ಅದಕ್ಕೆ ಒಂದು ಉಪಾಯ ಮಾಡಬೇಕು. ಸತ್ತು ಹೋದ ನನ್ನ ಅಣ್ಣನ ಚರ್ಮದಿಂದ ನನಗೆ ಒಂದು ಡೋಲು ಮಾಡಿ ಕೊಡು. ನಾನು ಆ ಡೋಲಿನ ಒಳಗೆ ಅಡಗಿ ಕೂತುಕೊಂಡು ಹೋಗುತ್ತೇನೆ. ಆಗ ನನ್ನನ್ನು ಯಾರೂ ಕಾಣಲಾರರು, ಹಿಡಿಯಲಾರರು' ಎಂದು ಹೇಳಿತು.ಅಜ್ಜಿಯು ಆಡಿನ ಮರಿಯನ್ನು ಮನೆಯಲ್ಲಿ ನಿಲ್ಲಿಸಿಕೊಂಡಿತು. ಮರಿಯು ಕಡುಬು ತಿಂದು ತೋರ ಬೆಳೆಯಿತು. ಒಂದು ದಿನ ಆ ಮರಿಯು 'ಅಜ್ಜೀ ಅಜ್ಜೀ ನಾನು ಇನ್ನು ನಮ್ಮ ಮನೆಗೆ ಹೋಗುತ್ತೇನೆ. ದಾರಿಯಲ್ಲಿ ನರಿ , ಹದ್ದು ಹುಲಿ, ಸಿಂಹ ಎಲ್ಲರೂ ಕಾದುಕೊಂಡು ಇದ್ದಾರೆ. ನಾನು ಹಿಂದಿರುಗಿ ಬರುತ್ತೇನೆ ಎಂದು ಮಾತು ಕೊಟ್ಟಿದ್ದೇನೆ. ಕೊಟ್ಟ ಮಾತನ್ನು ಮೀರಬಾರದು. ನನಗೆ ಡೋಲು ಮಾಡಿಕೊಡುವೆಯಾ?' ಎಂದು ಕೇಳಿತು.ಅಜ್ಜಿಯು ಒಂದು ಡೋಲು ಮಾಡಿಕೊಟ್ಟಳು. ಆಡಿನ ಮರಿಯು ಒಳಗೆ ಕೂತುಕೊಂಡಿತು. ಅಜ್ಜಿಯು ಆ ಡೋಲನ್ನು ದಾರಿಯ ಮೇಲೆ ಹೊರಳಿಸಿ ಬಿಟ್ಟಳು. ಡೋಲು ಗುಡಗುಡನೆ ಉರುಳುತ್ತಾ ಮುಂದೆ ಹೋಯಿತು.

ದಾರಿಯಲ್ಲಿ ಅ ಸಿಂಹವು ಕಾದುಕೊಂಡೇ ಇತ್ತು. ಅದು ಡೋಲನ್ನು ಕಂಡು, 'ನೀನು ಯಾರು?' ಎಂದು ಕೇಳಿತು. ಡೋಲಿನ ಒಳಗಿದ್ದ ಆಡಿನ ಮರಿಯು ' ನಾನು ಗುಡುಗುಡು ಗುಮ್ಮಟ ದೇವರು ' ಎಂದು ಹೇಳಿತು. ಸಿಂಹವು ಗುಡುಗುಡು ಗುಮ್ಮಟ ದೇವರೇ, ನೀವು ಆ ಆಡಿನ ಮರಿಯನ್ನು ಕಂಡಿದ್ದೀರೋ?ಎಂದು ಕೇಳಿತು. ಅದಕ್ಕೆ ಆಡಿನ ಮರಿಯು ' ಆಡು ಅಲ್ಲಿ ಆಡುತ್ತದೆ, ಡೋಲು ಇಲ್ಲಿ ಓಡುತ್ತದೆ; ದಾರಿ ಬಿಡಿ ಗುಡುಗುಡು ಗುಮ್ಮಟ ದೇವರಿಗೆ ' ಎಂದು ಹೇಳಿ ಡೋಲು ಬಡಿಯಿತು. ಡೋಲಿನ ಶಬ್ದಕ್ಕೆ ಸಿಂಹವು ಹೆದರಿ ಓಡಿ ಹೋಯಿತು. ಡೋಲು ಗುಡುಗುಡುನೆ ಉರುಳುತ್ತಾ ಮುಂದೆ ಹೋಯಿತು.

ದಾರಿಯಲ್ಲಿ ಅ ಹುಲಿಯು ಕಾದುಕೊಂಡೇ ಇತ್ತು. ಅದು ಡೋಲನ್ನು ಕಂಡು, 'ನೀನು ಯಾರು?' ಎಂದು ಕೇಳಿತು. ಡೋಲಿನ ಒಳಗಿದ್ದ ಆಡಿನ ಮರಿಯು ' ನಾನು ಗುಡುಗುಡು ಗುಮ್ಮಟ ದೇವರು ' ಎಂದು ಹೇಳಿತು. ಹುಲಿಯು ಗುಡುಗುಡು ಗುಮ್ಮಟ ದೇವರೇ, ನೀವು ಆ ಆಡಿನ ಮರಿಯನ್ನು ಕಂಡಿದ್ದೀರೋ? ಎಂದು ಕೇಳಿತು. ಅದಕ್ಕೆ ಆಡಿನ ಮರಿಯು ' ಆಡು ಅಲ್ಲಿ ಆಡುತ್ತದೆ, ಡೋಲು ಇಲ್ಲಿ ಓಡುತ್ತದೆ; ದಾರಿ ಬಿಡಿ ಗುಡುಗುಡು ಗುಮ್ಮಟ ದೇವರಿಗೆ 'ಎಂದು ಹೇಳಿ ಡೋಲು ಬಡಿಯಿತು. ಡೋಲಿನ ಶಬ್ದಕ್ಕೆ ಹುಲಿಯು ಹೆದರಿ ಓಡಿ ಹೋಯಿತು. ಡೋಲು ಗುಡುಗುಡುನೆ ಉರುಳುತ್ತಾ ಮುಂದೆ ಹೋಯಿತು.


ದಾರಿಯಲ್ಲಿ ಅ ನರಿ ಕಾದುಕೊಂಡೇ ಇತ್ತು. ಅದು ಡೋಲನ್ನು ಕಂಡು, 'ನೀನು ಯಾರು?' ಎಂದು ಕೇಳಿತು. ಡೋಲಿನ ಒಳಗಿದ್ದ ಆಡಿನ ಮರಿಯು ' ನಾನು ಗುಡುಗುಡು ಗುಮ್ಮಟ ದೇವರು ' ಎಂದು ಹೇಳಿತು. ನರಿ ಗುಡುಗುಡು ಗುಮ್ಮಟ ದೇವರೇ, ನೀವು ಆ ಆಡಿನ ಮರಿಯನ್ನು ಕಂಡಿದ್ದೀರೋ? ಎಂದು ಕೇಳಿತು. ಅದಕ್ಕೆ ಆಡಿನ ಮರಿಯು ' ಆಡು ಅಲ್ಲಿ ಆಡುತ್ತದೆ, ಡೋಲು ಇಲ್ಲಿ ಓಡುತ್ತದೆ; ದಾರಿ ಬಿಡಿ ಗುಡುಗುಡು ಗುಮ್ಮಟ ದೇವರಿಗೆ ' ಎಂದು ಹೇಳಿ ಡೋಲು ಬಡಿಯಿತು. ಆದರೆ ನರಿಗೆ ಆ ಆಡಿನ ಮರಿಯಾ ಸ್ವರವು ಗೊತ್ತಾಯಿತು. ನರಿಯು " ಓಹೋ! ಡೋಲು ಮಾತಾಡುವುದಿಲ್ಲ , ಆಡಿನ ಮರಿ ಮಾತಾಡುತ್ತದೆ. ಡೋಲಿನ ಒಳಗೆ ಆಡಿನ ಮರಿ ಇರಬೇಕು, ನಾನು ಹತ್ತಿರ ಹೋಗಿ ನೋಡುತ್ತೇನೆ' ಎಂದು ಡೋಲಿನ ಚರ್ಮಕ್ಕೆ ಬಾಯಿ ಹಾಕಿತು. ನರಿಯು ಡೋಲಿನ ಈ ಕಡೆ ಚರ್ಮ ಹರಿಯುವಾಗ , ಆಡಿನ ಮರಿಯು ಆ ಕಡೆಯಿಂದ ಹೊರಗೆ ಬಂದು ಕೂಡಲೇ ಮೇ ಮೇ ಎಂದು ಕಿರುಚಿತು. ಮರಿಯಾ ಕೂಗನ್ನು ಕೇಳಿ, ಅದರ ತಾಯಿ ತನ್ನ ಮನೆಯಿಂದ ಹೊರಗೆ ಬಂತು. ಅದನ್ನು ಕಂಡು ನರಿಯು ಜಾರಿ ಬಿಟ್ಟಿತು. ತಾಯಿ ಆಡು ಮರಿಯನ್ನು ಮನೆಯೊಳಗೇ ಕರೆದುಕೊಂಡು ಹೋಯಿತು. ಆಮೇಲೆ ಅವರು ಇಬ್ಬರೂ ಸುಖವಾಗಿದ್ದರು.

ಮಾಹಿತಿ ಸಂಗ್ರಹ : ಅಂತರ್ಜಾಲ



## ನಾ ಕಂಡ ಸಿನಿಮಾ "ಕೆ. ಜಿ. ಫ್ " : ಶ್ರೀ ಸ್ವರೂಪ್





KGF

ನಾನು ನೋಡಿದ ಸಿನೆಮ ಕೆ.ಜಿ.ಎಫ್. ಈ ಚಿತ್ರ 21 ನೇ ಡಿಸೆಂಬರ್ 2018 ರಂದು ಅಮೇರಿಕದಲ್ಲಿ ಬಿಡುಗಡೆ ಆಯಿತು. ನಾವೆಲ್ಲರು ಮೊದಲ show ಗೆ ಟಿಕೇಟ್ ಕಾಯಿದಿರಿಸಿ ಹೋಗಿ ನೋಡಿದೆವು! ಯಶ್ ಅಭಿನಯ ಅಭಿನಂದನೆಗೆ ಅರ್ಹವಾಗಿದೆ. ಎಲ್ಲರು ನೋಡುವಂತಹ ಸಿನೆಮ.


ರಾಕಿಂಗ್ ಸ್ಟಾರ್ ಯಶ್ ಅಭಿನಯದ ಬಹು ನಿರೀಕ್ಷಿತ ಚಿತ್ರ ಕೆ.ಜಿ.ಎಫ್ ನಿರೀಕ್ಷೆಯಂತೆಯೇ ಬಾಕ್ಸ ಆಫೀಸ್ ನಲ್ಲಿ ಧೂಳೆಬ್ಬಿಸಿದ್ದು, ಕನ್ನಡ ಚಿತ್ರ ನೋಡಿದ ನಮಗೆ ಸಂತೋಸ ತಂದಿದೆ.

ಈ ಚಿತ್ರ ಬಗ್ಗೆ ಹೇಳ್ತಿನಿ. 1951 ರಲ್ಲಿ ಎರಡು ಘಟನೆಗಳು ನಡೆದವು; ಒಂದು ರಾಜ ಕೃಷ್ಣಪ್ಪ ಬೈರಯ್ಯ ಹುಟ್ಟಿದ್ದು. ಇನೊಂದು ಕೆ.ಜಿ.ಎಫ್ ನಲ್ಲಿ ಚಿನ್ನ ಸಿಕ್ಕಿದ್ದು. ರಾಜು ಬಡತನದಲ್ಲಿ ಹುಟ್ಟುತ್ತಾನೆ ಹಾಗು ತಾಯಿಯ ಆಸೆಯಂತೆ ಶ್ರೀಮಂತನಾಗಲು ಬಾಂಬೆಗೆ ಹೋಗಿ ರಾಕಿ ಅಂತ ಹೆಸರು ಬದಲಿಸುತ್ತಾನೆ. ಆಮೇಲೇ ಅವನು ಪ್ರಸಿದ್ಧನಾಗುತ್ತಾನೆ. ಹೇಗೆ ಎಂಬುದನ್ನು ನೀವೆಲ್ಲರೂ ಚಿತ್ರ ನೋಡಿ ತಿಳಿಯಿರಿ!

ನನಗು ತಿಳಿಸಿ!




## ಪ್ರವಾಸಿ ತಾಣ : ದೇವರಾಯನದುರ್ಗ ಬೆಟ್ಟ



ದೇವರಾಯನದುರ್ಗ ಬೆಟ್ಟವು ತುಮಕೂರಿನಿಂದ ೧೬ ಕಿಮೀ ದೂರದಲ್ಲಿದೆ. ಇಲ್ಲಿ ಶ್ರೀ ಯೋಗ ನರಸಿಂಹ, ಹಾಗು ಶ್ರೀ ಭೋಗ ನರಸಿಂಹ, ಎಂಬ ಪ್ರಸಿದ್ಧ ದೇವಾಲಯಗಳಿವೆ. ಯೋಗ ನರಸಿಂಹ ದೇವಾಲಯವು ಬೆಟ್ಟದ ತುದಿಯಲ್ಲಿದೆ, ಭೋಗ ನರಸಿಂಹ ದೇವಾಲಯವು ಬೆಟ್ಟದ ಕೆಳಭಾಗದಲ್ಲಿದೆ. ಈ ಜಾಗ ಒಂದು ದಿನ ಪ್ರವಾಸಕ್ಕೆ ಯೋಗ್ಯವಾದ ಸ್ಥಳ. ಈ ದೇವಾಲಯಗಳು ದ್ರಾವಿಡ ಶೈಲಿಯಲ್ಲಿ ಕಟ್ಟಲಾಗಿದ್ದು ೨೦೦೦ ವರ್ಷದ ಇತಿಹಾಸವಿದೆ. ಶಿಲ್ಪದ ಶ್ರೇಷ್ಠತೆಗೆ ಹೆಸರುವಾಸಿಯಾದ ಚೋಳರ ಪ್ರೋತ್ಸಾಹಕ್ಕೊಳಗಾಗಿದೆ. ನರಸಿಂಹ ಸ್ವಾಮಿಯ ಜಾತ್ರೆಯು ಬಹಳ ಪ್ರಸಿದ್ಧವಾಗಿದ್ದು, ಪ್ರತಿವರ್ಷ ಸಾವಿರಾರು ಜನರು ಇಲ್ಲಿ ಬಂದು ಸೇರುತ್ತಾರೆ. ಹತ್ತಿರದಲ್ಲೇ ದುರ್ಗದಹಳ್ಳಿ ಎಂಬ ಹಳ್ಳಿಯಲ್ಲಿ ೮ ನೇ ಶತಮಾನದಲ್ಲಿ ಶ್ರೀ ಶಂಕರಾಚಾರ್ಯರು ಕಟ್ಟಿರುವ, ಶ್ರೀ ವಿದ್ಯಾಶಂಕರ ಸ್ವಾಮಿಯ ದೇವಾಲಯವಿದೆ. ಅದರ ಸಮೀಪದಲ್ಲೇ ನಾಯಕನ ಕೆರೆ ಎಂಬ ಸುಂದರ ಮತ್ತು ಮನೋಹರವಾದ ಕೆರೆಯೂ ಇದೆ.



## ವಾರ್ಲಿ - ಕೆಂಪು ನೆಲದ ಮೇಲೆ ಬಿಳಿ ಚಿತ್ತಾರ

ಚಿತ್ರಕಲಾ ಲೋಕ : ಸಿಂಧು ಕಿರಣ್





ವಾರ್ಲಿ ಎಂಬುದು ಮಹಾರಾಷ್ಟ್ರದ ಪಶ್ಚಿಮ ಘಟ್ಟದ ಒಂದು ಹಳ್ಳಿ. ಆದಿವಾಸಿಗಳಿರುವ ಈ ಹಳ್ಳಿಯಲ್ಲಿ ಹುಟ್ಟಿದ ಚಿತ್ರಕಲೆ 'ದಿ ವಾರ್ಲಿ ಆರ್ಟ್ಸ್ ' ಎಂದೇ ಪ್ರಸಿದ್ಧವಾಯಿತು. ಕ್ರಮೇಣ ಅದು ಗುಜರಾತ್, ಕರ್ನಾಟಕ ಸೇರಿದಂತೆ ಆದಿವಾಸಿಗಳಿರುವೆಲ್ಲೆಡೆ ಪಸರಿಸಿತು. ಈ ಚಿತ್ರವನ್ನು ಮದುವೆಯಾದ ಹೆಣ್ಣುಮಕ್ಕಳು ಬರೆಯುವುದು ಪದ್ಧತಿ. ಅವರನ್ನು ಸವಾಸಿನಿಯರು ಎಂದು ಕರೆಯುತ್ತಾರೆ. ಕೆಮ್ಮಣ್ಣು ಹಚ್ಚಿದ ಗೋಡೆ ಅಥವಾ ಸಗಣಿ ಇಂದ ಸಾರಿಸಿದ ನೆಲದ ಮೇಲೆ ಈ ಚಿತ್ತಾರವನ್ನು ಅಕ್ಕಿಯನ್ನು ನೆನೆಸಿ ರುಬ್ಬಿದ ಬಿಳಿ ಬಣ್ಣದೊಂದಿಗೆ ಬಿದಿರಿನ ಕಡ್ಡಿಯನ್ನು ಬ್ರಷ್ ನಂತೆ ಉಪಯೋಗಿಸಿ ವಿನ್ಯಾಸ ಗೊಳಿಸುತ್ತಾರೆ. ಕಾಲ ಬದಲಾದಂತೆ ಬಿಳಿ ಬಣ್ಣವನ್ನು,ಕೆಂಪು ನೆಲ, ಕಾಗದ, ಕ್ಯಾನ್ವಾಸ್ ಹಾಗು ಬಟ್ಟೆಗಳ ಮೇಲು ಉಪಯೋಗಿಸುತ್ತಾರೆ . ಆದಿವಾಸಿಗಳು ಪ್ರಕೃತಿ ಆರಾಧಕರು . ಬಹುಷಃ ಇದೆ ಕಾರಣಕ್ಕೆ ಅವರು ದೇವರ ಚಿತ್ರವನ್ನು ಬರೆಯುವುದಿಲ್ಲ ಅದರ ಬದಲು ಅವರ ದೈನಂದಿನ ಬದುಕು ಚಿತ್ರರೂಪದಲ್ಲಿ ಅನಾವರಣ ಗೊಳ್ಳುತ್ತದೆ. ನದಿ, ಕಾಡು, ಹುಲ್ಲು, ಮರ, ಭಾವಿ,ಸಿಂಹ, ಹುಲಿ, ಬೆಕ್ಕು, ನವಿಲು, ಮನೆ, ಪುರುಷ, ಮಹಿಳೆ, ಸೂರ್ಯ, ಚಂದ್ರ ಹೀಗೆ ಕಣ್ಣಿಗೆ ಕಂಡದ್ದು ಕಲ್ಪನೆಗೆ ಬಂದದ್ದೆಲ್ಲವೂ ಚಿತ್ತಾರದಲ್ಲಿ ಮೂಡುತ್ತದೆ. ಅನೇಕ ವಾರ್ಲಿ ವರ್ಣಚಿತ್ರಗಳಲ್ಲಿ ಚಿತ್ರಿಸಿದ ಕೇಂದ್ರ ಅಂಶವೆಂದರೆ ಟಾರ್ಪಾ ನೃತ್ಯ. ಟಾರ್ಪಾ, ಒಂದು ತುತ್ತೂರಿ-ರೀತಿಯ ವಾದ್ಯ. ಮಧ್ಯದಲ್ಲಿ ಒಂದು ಕೇಂದ್ರ ಮೋಟಿಫ್, ಸುತ್ತಲು ಮಾನವರ ಸುರುಳಿಯ ಸರಣಿಯನ್ನು ಮಾಡುತ್ತಾರೆ .ಜೀವನವು ಒಂದು ಶಾಶ್ವತ ಪ್ರಯಾಣ ಎಂದು ಮತ್ತು ಇದು ಯಾವುದೇ ಆರಂಭ ಮತ್ತು ಅಂತ್ಯವನ್ನು ಹೊಂದಿಲ್ಲ ಎಂಬುದು ಅವರ ನಂಬಿಕೆ .

**ನುಡಿಮುತ್ತು :**

**"ಯಾವ ವ್ಯಕ್ತಿ ತನ್ನ ತಪ್ಪನ್ನು ತಿದ್ದಿಕೊಳ್ಳಲು ತಾನಾಗಿಯೇ ಹೋರಾಟ ಮಾಡುತ್ತಾನೋ , ಅವನನ್ನು ಸೋಲಿಸಲು ಯಾರಿಂದಲೂ ಸಾಧ್ಯವಿಲ್ಲ "**

**ಸುಭಾಷಿತ:**

**ಓಡಲು ಸಾಧ್ಯವಾಗದಿದ್ದಲ್ಲಿ ನಿಧಾನವಾಗಿ ನಡೆದರೂ ಗುರಿ ಮುಟ್ಟಬಹುದು, ಆದರೆ ಹಿಂದಿರುಗಬೇಡಿ.**



## ಮಂಕುತಿಮ್ಮನ ಕಗ್ಗ

**ಒಂದೇ ಗಗನವ ಕಾಣುತೊಂದೆ ನೆಲವನು ತುಳಿಯು ।**
**ತೊಂದೆ ಧಾನ್ಯವನುಣ್ಣುತೊಂದೆ ನೀರ್ಗುಡಿದು ॥**
**ಒಂದೇ ಗಾಳಿಯನುಸಿರ್ವ ನರಜಾತಿಯೊಳಗೆಂತು ।**
**ಬಂದುದೀ ವೈಷಮ್ಯ? – ಮಂಕುತಿಮ್ಮ॥ ೧೪**

ಈ ಜಗತ್ತಿನಲ್ಲಿರುವ ಮಾನವರೆಲ್ಲರಿಗೂ, ಮಾನವರಿಗಷ್ಟೇ ಏನು ಸಕಲ ಜೀವಿ ಸಂಕುಲಕ್ಕೂ ತಲೆಯ ಮೇಲಿನ ಆಕಾಶ ಒಂದೇ. ಇರುವ ಭೂಮಿಯೂ ಒಂದೇ, ಎಲ್ಲರೂ ತಿನ್ನುವುದು ಒಂದೇ ರೀತಿಯ ಆಹಾರ, ಕುಡಿಯುವ ನೀರಿಗೂ ಒಂದೇ ಮೂಲ, ಹಾಗಿದ್ದರೂ ಏಕೆ ಈ ವೈಷಮ್ಯ,ಈ ದ್ವೇಷ ಎಂಬ ಪ್ರಶ್ನೆ ಕಾಲಾನುಕಾಲಕ್ಕೆ ಎಲ್ಲ ಚಿಂತಕರ ಮನಗಳಲ್ಲೂ ಸುಳಿದು, ಉತ್ತರ ಕಂಡು ಕೊಳ್ಳಲು ಪ್ರಯತ್ನ ಆಗಿದೆ.

## ಪದ ಹುಡುಕೋಣ – ಲೇಖನ ಸಾಮಗ್ರಿಗಳು

| | | | | | | | | | | | |
|---|---|---|---|---|---|---|---|---|---|---|---|
| ಭಾ | ರ | ತ | ಫೈ | ಪು | ಟ್ಟ | ಟ್ | ಸಿ | ದ್ದ | ಲಿಂ | ಗ | ಯ್ಯ |
| ನಿ | ಮ್ಮ | ಷ್ಪು | ಲ್ | ಐ | ದು | ಸ್ಲೇ | ಊ | ಪೇ | ಪ | ರ್ | ಝು |
| ಖ | ಬ | ಳ | ಪ | ದ | ಕ | ಡ್ಡಿ | ಒಂ | ಬ | ತ್ತು | ಜ | ಕ |
| ದೊ | ಡ್ಡ | ಕಾ | ಡಿ | ನ | ಲ್ಲಿ | ಆ | ಚಾ | ಹು | ಡು | ಗ | ವ |
| ಇ | ಬ | ಣ್ಣ | ದ | ಪೆ | ನ್ಸಿ | ಲ್ | ಕ್ | ವ | ಸಂ | ತ | ರ್ |
| ಸೀ | ಝು | ಕ | ಚೈ | ತ್ರ | ಪೆ | ನ್ನು | ಪೀ | ಲೇ | ಕ್ | ಸ್ಟ್ಯಾಂ | ಪು |
| ಲ್ | ಓ | ಪ್ಪು | ಸು | ಳಿ | ಯ | ಲ್ಲಿ | ಸ್ | ಪೆ | ನ | ದಿ | ಯ |
| ನಾ | ಲ್ಕು | ಹ | ಕ್ರೇ | ಡೆ | ಇಂ | ನ | ವಿ | ಲು | ನ್ಸಿ | ಗ | ರಿ |
| ಗು | ಟ್ಟು | ಲ | ಕ | ತೆ | ಕು | ಬ | ರ | ಹ | ಕಾ | ಲ್ | ಝು |
| ಮ | ಹಾ | ಗೆ | ಕಂ | ಪ್ಯೂ | ಟ | ರ್ | ರ | ಈ | ರ್ಬ | ದೇ | ವ |
| ಕ | ಕಂ | ಬ | ಮೆಂ | ಐ | ಪಿ | ನ್ನು | ಬ್ಬ | ಎ | ನ್ | ಖ | ಕಾ |
| ತ್ತ | ಲೇ | ಕ್ | ಡ | ಭಾ. | ಸ | ನ | ರ್ | ಧಿ | ಕಾ | ಘ | ಗ |
| ರಿ | ರ | ಣ | ರ್ | ಕ್ಲಿ | ಸೊ | ಗ | ಅಂ | ಸಿ | ಗ | ನ | ದ |
| ಮೊ | ದಾ | ದ | ಲ | ಪ್ | ಪ್ಲಂ | ಲ್ಲಿ | ಟು | ರೈ | ದ | ಸು | ಖ |

| | | | |
|---|---|---|---|
| ಪೆನ್ನು | ಬಣ್ಣದಪೆನ್ಸಿಲ್ | ಸ್ಟ್ಯಾಂಪು | ಕತ್ತರಿ |
| ಪೆನ್ಸಿಲ್ | ಸ್ಲೇಟ್ | ಕ್ಲಿಪ್ | ದಾರ |
| ರಬ್ಬರ್ | ಬಳಪದ ಕಡ್ಡಿ | ಚಾಕ್‌ಪೀಸ್ | ಅಂಟು |
| ಮೆಂಡರ್ | ಕವರ್ | ಫೈಲ್ | ಇಂಕು |
| ಪಿನ್ನು | ಕಪ್ಪುಹಲಗೆ | ಕಾಗದ | ಸೀಲ್ |
| ಕಾರ್ಬನ್‌ಕಾಗದ | | | |

ಕೃಪೆ : ಮಕ್ಕಳ ಕೈಪಿಡಿ –ವಸ್. ಪ್ರಾ

## ಚಿತ್ರ ಶೀರ್ಷಿಕೆ : ಉಷಾ ನಂದೀಶ್



ಬಾರೆಲೇ ಹಕ್ಕಿ ಬಣ್ಣದ ಹಕ್ಕಿ, ಬಾರೆಲೇ ಹಕ್ಕಿ ಹಾರುವ ಹಕ್ಕಿ...



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ



**ಪತ್ರ ೬**

**ಪ್ರೀತಿಯ ಪುಟಾಣಿಗಳೆ,**

ಮಕ್ಕಳನ್ನು ಮುಗ್ಧರನ್ನಾಗಿ ಉಳಿಸಿಕೊಳ್ಳುವ ಯುಗವಲ್ಲ ನಮ್ಮದು. ಬದಲಿಗೆ ಇದುವರೆಗಿನ ನಾಗರಿಕತೆಯ ಬೌದ್ಧಿಕಸತ್ವವನ್ನೆಲ್ಲ ಅವರಿಗೆ ಅರೆದುಕುಡಿಸಲು ಪ್ರಚೋದಿಸುವ ಯುಗ. ಸಮರ್ಥ ವಿದ್ಯಾರ್ಥಿ\ನಿಯರಾಗದೆ ಮಕ್ಕಳಿಗೆ ಉಳಿಗಾಲವಿಲ್ಲ ಎಂಬಂಥ ಕಾಲದಲ್ಲಿದ್ದೇವೆ. ಅದಕ್ಕೇ ವಿಶ್ವೇತಿಹಾಸದ ಗಂಭೀರ ವಿಷಯಗಳ ಪ್ರಸ್ತಾಪ ಮತ್ತೆಮತ್ತೆ ಅನಿವಾರ್ಯವಾಗುತ್ತದೆ.

ವಸ್ತು(ಮ್ಯಾಟರ್) ಮತ್ತು ಚೈತನ್ಯ(ಎನರ್ಜಿ)ಗಳ ಸಂಬಂಧದ ಆಳಕ್ಕಿಳಿದು ಥಿಯರಿ ಆಫ್ ರಿಲೇಟಿವಿಟಿ ಪ್ರತಿಪಾದಿಸಿದ ಆಲ್ಬರ್ಟ್ ಐನ್‌ಸ್ಟೈನ್(೧೪.೦೩.೧೮೭೯–೧೮.೦೪.೧೯೫೫) ಬಾಲ್ಯದಲ್ಲಿ ತುಂಬತಡವಾಗಿ ಮಾತುಕಲಿತ. ಮಗ್ಗಿಹೇಳುವ ಮನಾಟನಿ ತಾಳಲಾರದೆ ಶಾಲೆಗೆ ಚಕ್ಕರ್‌ಹಾಕಿ ಹತ್ತಿರದ ಪಾರ್ಕಿನಲ್ಲಿ ಸುತ್ತಾಡುತ್ತಿದ್ದ. ಮೇಷ್ಟ್ರುಗಳಿಗೆ ಮನೋವಿಕಲನಂತೆ ಕಂಡಿದ್ದ. ಮನೆಕೆಲಸದವಳು ಅವನಿಗೆ 'the dopey one' ಎಂಬ ಅಡ್ಡಹೆಸರು ಹಾಕಿದ್ದಳು. ಯುದ್ಧಕಲೆಗೆ ಪ್ರೋತ್ಸಾಹವೀಯುತ್ತಬಂದಿರುವ ಮಹಾಮಹಾನ್ ವಿಜ್ಞಾನಿಗಳೆಲ್ಲ ಸಾವಿನ ವ್ಯಾಪಾರಿಗಳು ಎಂದು ಬರ್ಟ್ರ್ಯಾಂಡ್ ರಸೆಲ್ ಆರೋಪಿಸಿದ್ದಾನೆ 'ದ ಸೋಷಿಯಲ್ ರೆಸ್ಪಾನ್ಸಿಬಿಲಿಟೀಸ್ ಆಫ್ ಸೈಂಟಿಸ್ಟ್ಸ್' ಪ್ರಬಂಧದಲ್ಲಿ. ಐನ್‌ಸ್ಟೈನ್ ಆ ಲಿಸ್ಟಿಗೆ ಸೇರುವದಿಲ್ಲ. ತಾನು ಕಂಡುಹಿಡಿದ E=mc2 ಸೂತ್ರದ ಭಯಾನಕ ಆವಿಷ್ಕಾರವೆಂಬಂತೆ ಆ್ಯಟೋಮಿಕ್ ಎನರ್ಜಿಯಿಂದ ಆ್ಯಟಂಬಾಂಬ್ ತಯಾರಿಸಿ ಹಿರೋಷಿಮಾ–ನಾಗಸಾಕಿಮೇಲೆ ವಿದ್ರಾವಕ ದಾಳಿನಡೆಸಿದಾಗ "ಹಾರಿಬಲ್ ಹಾರಿಬಲ್" ಎಂದು ಪದೇಪದೆ ಜಿಗುಪ್ಸೆಗೆ ಜಾರುತ್ತ ಅಮೆರಿಕನ್ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ಐನ್‌ಸ್ಟೈನ್ ವಿಶ್ವಶಾಂತಿ ಪರವಾಗಿನಿಂತ ವೈಶಿಷ್ಟ್ಯಪೂರ್ಣ ವಿಜ್ಞಾನಿ. ಸುಪ್ರಸಿದ್ಧ 'ರಸೆಲ್–ಐನ್‌ಸ್ಟೈನ್ ಮ್ಯಾನಿಫೆಸ್ಟೊ'(೧೯೫೫) ಅಣುಯುದ್ಧ ಎಷ್ಟು ಅಪಾಯ ಕಾರಿ ಎಂಬುದನ್ನ ಎಲ್ಲದೇಶ\ಸರ್ಕಾರಗಳಿಗು ಮನದಟ್ಟು ಮಾಡಿಸಿ, ಯಾವದೇ ಸಮಸ್ಯೆಗಳಿರಲಿ ಶಾಂತಿಯುತವಾಗಿ ಬಗೆಹರಿಸಿಕೊಳ್ಳಲು ಒತ್ತಾಯಿಸುತ್ತದೆ. ಯಹೂದಿ(ಜ್ಯೂ)ಗಳಮೇಲೆ ಹಿಟ್ಲರ್ ನಡೆಸಿದ ಹಿಂಸಾಚಾರಕ್ಕೆ ಹೇಸಿ, ಜರ್ಮನ್ ವಿಜ್ಞಾನಿಗಳು ತನ್ನ ಸಂಶೋಧನೆ ಯನ್ನು 'ಜ್ಯೂಯಿಷ್ ಫಿಸಿಕ್ಸ್'ಎಂದು ಜರಿದದ್ದಕ್ಕೆ ರೋಸಿ, ಹುಟ್ಟುದೇಶ ಜರ್ಮನಿಯ ಪೌರತ್ವವನ್ನೆ ತಿರಸ್ಕರಿಸಿದ ಐನ್‌ಸ್ಟೈನ್. ಅವನೆಂಥಾ ಮಾನವತಾವಾದಿಯೆಂದು ಸ್ಪಷ್ಟಪಡಿಸುತ್ತದೆ ಈ ಮಾತು: I am by heritage a Jew, by citizenship a Swiss, and by makeup a human being, and only a human being, without any special attachment to any state or national entity whatsoever. ಮೇಲ್ನೋಟಕ್ಕೆ ಸತ್ಯದಂತೆಕಾಣುವ ಸಮಕಾಲೀನಜಗತ್ತಿನ ಅನೇಕಗ್ರಹಿಕೆಗಳು ಐನ್‌ಸ್ಟೈನ್‌ಗೆ ಅಪರಿಪೂರ್ಣ ಎನಿಸುತ್ತಿ ದ್ದವು. ಹೀಗಾಗಿ ಅವಕ್ಕೆ ಅವನೀಡುವ ಪ್ರತಿಕ್ರಿಯೆಗಳು ಒಗಟಿನಂತಿರುತ್ತಿದ್ದವು. ಅವನ ಕೆಲವು ಹೇಳಿಕೆಗಳು ವಿಜ್ಞಾನ ಮತ್ತು ಅಧ್ಯಾತ್ಮ (ಸ್ಪಿರಿಚುವಲಿಸ್ಮ್) \ಅನುಭಾವ(ಮಿಸ್ಟಿಸಿಸಂ)ಗಳನ್ನು ಕಸಿಮಾಡಿದಂತೆ ಇವೆ: Science without religion is lame, religion without science is blind ಎಂಬುದು ಅಂಥ ಹೇಳಿಕೆ.

ಸಂಚಿಕೆ ೧೩
ಜನವರಿ 2019





## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

೧೯ನೆ ಶತಮಾನದಲ್ಲಿ ಭೌಗೋಳಿಕ ಶೋಧನೆ ಹಾಗು ವೈಜ್ಞಾನಿಕ ಸಂಶೋಧನೆ ಚುರುಕು ಗೊಂಡು ಹೊಸ ಆವಿಷ್ಕಾರಗಳು ಕಾಲಿಟ್ಟಮೇಲೆ ಧರ್ಮ ಮತ್ತು ವಿಜ್ಞಾನ ಪರಸ್ಪರ ವಿರುದ್ಧ ನೆಲೆಯವು ಎಂಬ ಜನಾಭಿಪ್ರಾಯ ರೂಪು ಗೊಂಡಿತ್ತು. ಇದು ಬರಿ ಮೇಲುಮೇಲಿನ ವಿಶ್ಲೇಷಣಾತ್ಮಕ ಸತ್ಯವೆಂದು ಮನಗಂಡ ಐನ್‌ಸ್ಟೈನ್ ಸಂಶ್ಲೇಷಣಾತ್ಮಕವಾದ ತಳಸತ್ಯದ ದರ್ಶನ ಮಾಡಿಸಲೆಂದು ಧರ್ಮಕ್ಕು ವಿಜ್ಞಾನಕ್ಕು ಸೇತುವೆಕಟ್ಟುವ ಈ ಹೇಳಿಕೆನೀಡಿ ವಿಶ್ವವನ್ನೆ ನಿಬ್ಬೆರಗಾಗಿಸಿದ. ವಿಜ್ಞಾನಕ್ಕೆ ಕಣ್ಣಿದೆ ಆದರೆ ಕಾಲಿಲ್ಲ, ಧರ್ಮಕ್ಕೆ ಕಾಲಿದೆ ಆದರೆ ಕಣ್ಣೆ ಇಲ್ಲ ಎಂಬ ಒಳನೋಟನೀಡಿದ. ವಿಜ್ಞಾನ ಧರ್ಮದ ಕಾಲುಗಳನ್ನೂರಿ ನಡೆಯ ಬಲ್ಲದು, ಧರ್ಮ ವಿಜ್ಞಾನದ ಕಣ್ಣುಗಳಿಂದ ನೋಡಬಲ್ಲದು ಎಂದು ಬೆಡಗಿನಮಾತಿನಿಂದ ಬಣ್ಣಿಸಿದ. ಧರ್ಮವಿಲ್ಲದೆ ವಿಜ್ಞಾನದ ಮುನ್ನಡೆಯಿಲ್ಲ, ವಿಜ್ಞಾನವಿಲ್ಲದೆ ಧರ್ಮಕ್ಕೆ ದೃಷ್ಟಿಯೆ ಇರುವದಿಲ್ಲ ಎಂಬುದು ಅವ ಕಾಣಿಸಿಕೊಟ್ಟಿರುವ ತಳಸತ್ಯ. ಅವನ ಈ ಹೇಳಿಕೆಯಲ್ಲಿ ಧರ್ಮ ಶಬ್ದಕ್ಕೆ ಸ್ಥಾಪಿತ ಮತೀಯಧರ್ಮ ಎಂಬರ್ಥವಿಲ್ಲ; ಜೀವಕಾರುಣ್ಯದ ಮಾನವೀಯ ಧರ್ಮ\ಅಖಂಡಸೃಷ್ಟಿಹಿಂದಿನ ಅಧ್ಯಾತ್ಮ\ಜೀವ–ದೇವ ಅನುಭಾವ ಎಂಬ ವಿಶಾಲಾರ್ಥವಿರುವದನ್ನ ಗಮನಿಸಿ. ಈ ಕಾರಣಕ್ಕೆ ಅವನನ್ನು ಆನುಭಾವಿಕ ವಿಜ್ಞಾನಿ (ಮಿಸ್ಟಿಕಲ್ ಸೈಂಟಿಸ್ಟ್) ಎನ್ನುವವರೂ ಇದ್ದಾರೆ. ಜಗತ್ತು ಪ್ರೀತಿಯಿಂದ ಒಪ್ಪಿಕೊಂಡಿರುವ ಕೆಲವು ಜೋಡಿವಸ್ತುಗಳ ನಡುವಣ ಅಂತರವನ್ನು ಥಾಳಾಗಿ ಕಾಣಿಸಿಕೊಡುವದು ಹಾಗು ಜಗತ್ತು ವೈರುಧ್ಯ\ವೈದೃಶ್ಯ(ಕಾಂಟ್ರಾಸ್ಟ್)ವೆಂದು ಗುರುತಿಸುವ ವಿರುದ್ಧ ವಸ್ತು\ ಸಂಗತಿಗಳನ್ನು ಒಟ್ಟಿಗೆ ಹಿಡಿದು ತೋರಿಸುವದು ಐನ್‌ಸ್ಟೈನ್‌ನ ಐ.ಕ್ಯೂ.ಗೆ ಅತ್ಯಗತ್ಯವೆಂದು ತೋರುತ್ತಿತ್ತು. ಕಿಷ್ಟವಾದ ಅಭಿಪ್ರಾಯವನ್ನು ವಿರೋಧಾಭಾಸ (ಪ್ಯಾರಡಾಕ್ಸ್) ಬಳಸಿ ಹೇಳುತ್ತಾ ಹೊಸಸತ್ಯವನ್ನು ಕಾಣಿಸಲೆತ್ನಿಸಿದ ಐನ್‌ಸ್ಟೈನ್. ಪ್ಯಾರಡಾಕ್ಸ್ ಎಂದರೆ ಮೇಲುನೋಟಕ್ಕೆ ಪರಸ್ಪರ ವಿರುದ್ಧವಾದ ಅರ್ಥಗಳನ್ನು ಒಳಗೊಂಡಂತಿರುವ ಅಥವ ಅಸಂಗತವೆಂಬಂತೆ ತೋರುವ, ಆದರೆ ಸತ್ಯದ ಅಂಶವನ್ನು ಒಳಗೊಂಡಂತಿರುವ ಹೇಳಿಕೆ(ವಿಮರ್ಶೆಯ ಪರಿಭಾಷೆ,ಓ.ಎಲ್. ನಾಗಭೂಷಣಸ್ವಾಮಿ,೧೯೯೮,ಪುಟ೨೩೫). ಮೇಧಾವಿ ಐನ್‌ಸ್ಟೈನ್‌ನ ಕೆಲವು ಪ್ಯಾರಡಾಕ್ಸಿಕಲ್ ಸ್ಟೇಟ್‌ಮೆಂಟ್ಸ್ ಜೇಬಿಗೆ ಹಾಕಿಕೊಳ್ಳಿ, ನಾಳೆ ಉಪಯೋಗಕ್ಕೆ ಬಂದಾವು:

1. Not everything that can be counted counts, and not everything that counts can be counted.
2. Wisdom is not a product of schooling but of the lifelong attempt to acquire it.
3. The most incomprehensible thing about this universe is that it is comprehensible.
4. Great spirits have always encountered violent opposition from mediocre minds.
5. The true sign of intelligence is not knowledge but imagination.

**೨೦೧೯ ಹೊಸ ವರ್ಷದ ಹಾರ್ದಿಕ ಶುಭಾಶಯಗಳು** **ನಿಮ್ಮ ಮೂರ್ತಿತಾತ**



ಸಂಚಿಕೆ ೧೩
ಜನವರಿ 2019

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್
rajanisomayaji@gmail.com